“ಬಡವರ ಸೇವೆಯೇ ಭಗವಂತನ ಸೇವೆ.”

ಯಾವ ಜಗತ್ತು ಸರ್ವ ಶಕ್ತಿಯುತನಾದ ಭಗವಂತನ ಕರುಣಾ ಕಟಾಕ್ಷದಿಂದ ಸದಾ ರಕ್ಷಿಸಲ್ಪಡುತ್ತದೋ, ಅಂತಹವನ ಪಾದಾರವಿಂದಕ್ಕೆ ಭಕ್ತಿಯಿಂದ ಮಣಿಯುವೆನು.

ESTABLISHED 1932.

“ಬಡವರ ಬಂಧು”

ಸಂಪುಟ ೧. | ತಾರೀಕು ೧ನೇ ನವಂಬರ ೧೯೩೨. | ಸಂಚಿಕೆ ೭.

ಧನಿಕನ ಅಂತಿಮಕಾಲ.

[ಚೌಪದಿ]

“ಕೃಪಣತನದಿಂ ಧನವನುಪಯೋಗಿಸಿದೆ ನಾನು ।
ಕುಪಿತನಾದೆನು ದೀನ ಜನರೊಳಂದು ॥
ವಿಪರೀತವಾಗಿ ಬಡಜನರ ಗೋಳಾಡಿಸಿದೆ ।
ಕೃಪಣನೆಂಬೀ ಬಿರುದ ಪಡೆದೆ ಜಗದಿ ॥ ೧ ॥

ದೇವ ನಿನ್ನಯ ಮೈಮೆಯುಳವನರಿಯದೆ ಬರಿದೆ ।
ದೇವನಿಲ್ಲೆಂದು ಭಾವಿಸಿ ಮೆರೆದೆನೂ– ॥
ಸಾವೀಗ ಸನ್ನಿಹಿತವಾಗಿಹುದು ದೇವಾಧಿ ।
ದೇವನೇ! ದಯದೋರಿ ಕಾಪಾಡೆಯಾ? ॥ ೨ ॥

ಆಶಾಂಗನೆಯ ಮೋಹಪಾಶದೆಳತಕೆ ಸಿಕ್ಕಿ ।
ದೋಷ ಪಥವನು ಹಿಡಿದು ಮೋಸದಿಂದ ॥
ಘಾಸಿಯಾದೆನು ದೇವ! ದೋಷಿಯಾದೆನು ಕಾವ ।
ರೀ ಸಮಯದಲಿ ನಿನ್ನ ಬಿಟ್ಟರಿನ್ನಾರು? ॥ ೩ ॥

ಬಳಲಿಸಿದೆ ಬಡವರನು, ಕೊಲಿಸಿದೆನು ಹಲವರನು– ।
ಬಲು ಮೆರೆದು ಕೆಟ್ಟೆ ನಿನ್ನನು ಮರೆಯುತ; ॥
ಗಳಿಸಿದೆನು ಧನವನನ್ಯಾಯದಿಂ; ಬಡವರನು– ।
ಸುಲಿದು ಸೂರೆಯಗೊಂಡ ದುರುಳ ನಾನು ॥ ॥ ೪ ॥

ತಾಮಸರ ಕೂಡಿಕೊಂಡಮಿತ ಪಾಪವ ಗಳಿಸಿ, ।
ಭಾಮಿನಿಯರಂ ಕೆಡಿಸಿ, ದುಷ್ಟತನದ ॥
ಸೀಮೆಯಿಲ್ಲದ ಪಾಪಸಾಗರದಿ ಮುಳುಗಿರುವೆ ।
ನೀ ಮಹಿಯೊಳೆನ್ನ ರಕ್ಷಿಪರ ಕಾಣೆ! ॥ ೫ ॥

ಅಯ್ಯಯ್ಯೊ! ಯಮನವರು ಬರುತಿರ್ಪರೆನ್ನೆಡೆಗೆ, ।
ಕಯ್ಯಲ್ಲಿ ಪಾಶವಂ ಧರಿಸಿರುವರೂ ॥
“ಒಯ್ಯುವೆವು ನಿನ್ನನಾ ನರಕಕೂಪಕ್ಕೆ”ಂದು ।
ಬಯ್ಯುವರು “ಪಾಪಿ ಚಾಂಡಾಲನೆ”ಂದು ॥ ೬ ॥

ಧನವು ಬಾರದು ನನ್ನ, ಸತಿಸುತರು ಬಾರರೀ ।
ಜನನಿ ಬಾರಳು ನನ್ನೊಡನೆ ನರಕಕೆ ॥
ಮನೆ ಬಾರದಾದಡೆನ್ನಯ ಪಾಪಕೃತ್ಯಂಗ ।
ಳನವರತ ಬೆಂಬಿಡದೆ ಬರುತಿರುವುವೂ ॥ ೭ ॥

ಗೋಪಾಲಕೃಷ್ಣ ಅಡಿಗ, ಬೈಂದೂರು.

ಬಡವನ ನರಕ.

ಧರೆಯುಲಿ ಜನರಿಗೆ ಬಡತನ ಬಂದರೆ
ಮನೆಯೇ ಮಸಣದಂತಾಗುವುದು.
“ಹಾ! ವಿಧಿ!” ಎಂಬಳು ಹೆಂಡತಿಯು
‘ಗೋಳೋ’ ಎನುವರು ಬಾಲಕರು.
ಎದೆ ಭುಗಿಲೆನಿಸುವುದು,
ತನು ಸುಡುತಿಹುದು,
ಚಿತೆಯುರಿಯಲಿ ಹೆಣ ನಶಿಸುವ ತೆರ
ಕ್ಷಣಕ್ಷಣ ಕ್ಷೀಣವ ಹೊಂದುವರು.
ಹೆಂಡತಿಮಕ್ಕಳ ಪೋಷಣೆಗೆಂದು
ಅಂಡಲೆದಲೆಯುತ ಮನೆಗೈತರಲು,
“ತಂದುದ ಸುರಿಯಿರಿ
ತಿನುವರೆ ಕೊಡಿರಿ”
ಎನುತಿರೆ ಅವರಿಗೆ ಬರಿಗೈ ತೋರ್ದಡೆ,
ಹಸಿವಿನ ತಾಪದಿ ಮಕ್ಕಳು ಒಂದೆಡೆ,
ಸತಿಯೊಂದೆಡೆ ತಾ ಗುಣುಗುಟ್ಟುವರು;
ಮರುಕವ ತೋರ್ಪರು ಕಂಬನಿಗರವರು.
ಅದನೋಡುತ ನಿಂತು
ಸಂತಯಿಸುವುದೆಂತು?
ಕೇಳಿದೊಡೀವರೆ ಧನವುಳ್ಳವರು?
ಒತ್ತೆಯನಿಡದಿರೆ ಸಾಲವನೀವರೆ?
ದೊರೆವುದೆ ಕೂಳು ಉದರವ ತೋರಿಸದೆ?
ಬರಬೇಡೆಂಬರು! ಕಾಡದಿರೆಂಬರು!
ಬಡವನು ಬಂಧುವಿಹೀನ!
ಎಣಿಸಲು ತೃಣಕೆ ಸಮಾನ!
ಜೀವಿತದಶೆಯಲಿ ಬಡತನ ಬಂದರೆ
ಮಾನವ ಪೋವುದು, ಗೌರವ ಪೋವುದು
ಆಗದೇ ಅದೇ ಮರಣ?
ಮನೆಯೇ ಮಸಣ?
ಸತಿಸುತರಲ್ಲಿಹ ಭೂತಗಣ!

ಪಿ. ಕೃಷ್ಣಯ್ಯ, ಬಂಟ್ವಾಳ.

ಸುಲಭವಾದ ದಾರಿಯು ಕಷ್ಟವನ್ನುಂಟುಮಾಡುವುದು. (ಆತುರಪಟ್ಟರೆ ಕೆಲಸ ಕೆಡುವುದು.)

ಬಡತನವೆಂಬುದೊಂದು ಅಸ್ಪೃಶ್ಯತೆ.

(ಸಂಪಾದಕೀಯ.)

ಮಹಾತ್ಮಾ ಗಾಂಧಿಯವರ ಪಾವನೋಪವಾಸದ ಪರಿಣಾಮವಾಗಿ ಪತಿತ ವರ್ಗದವರ ಉದ್ಧಾರ ಕಾರ್ಯವು ಮೇಲಕ್ಕೆ ಎತ್ತಿ ಹಿಡಿಯಲ್ಪಟ್ಟಿತು. ದೇವಸ್ಥಾನ ಪ್ರವೇಶವೇ ಮೊದಲಾದ ಅದ್ಭುತ ಘಟನೆಗಳ ಪ್ರಚಂಡ ಬಿರುಗಾಳಿಯು ಭರತವರ್ಷದ ಉದ್ಯಾನದಲ್ಲಿ ಬೀಸಿಬಿಟ್ಟಿತು. ಅಸ್ಪೃಶ್ಯರೇಳ್ಗೆಯಾಗಬೇಕಾದರೆ ಹಿಂದೂಗಳು ಅವರನ್ನು ತಮ್ಮ ಮನೆಮಠ ದೇವಾಲಯಗಳಿಗೆ ಪ್ರವೇಶಿಸಬಿಡಬೇಕೆಂದೂ, ಭಜನೆ ಭೋಜನಗಳಲ್ಲಿ ಅಸ್ಪೃಶ್ಯರೊಡನೆ ಸೇರಿಕೊಂಡು ಸ್ಪೃಶ್ಯಾಸ್ಪೃಶ್ಯತೆಯ ಭೇದ ಪಕ್ಷವನ್ನು ಕಡಿದು ಹಾಕಬೇಕೆಂದೂ ಪ್ರತಿಯೊಬ್ಬ ಧುರೀಣನ ಅಭಿಮತವಿರುತ್ತದೆ. ಇಷ್ಟು ಮಾತ್ರದಲ್ಲಿ ಅಸ್ಪೃಶ್ಯರ ಉದ್ಧಾರವಾಗುವುದೇ?

ಅಸ್ಪೃಶ್ಯರ ಮೇಲಿರುವ ಅಸಹ್ಯತಾಭಾವವು ಜಾತಿ ಹಿಂದೂಗಳ ಹೃದಯಾಂತರದಿಂದಾಗಿ ಹೋಗಬೇಕಾದರೆ, ಸ್ಪೃಶ್ಯರು ಅಸ್ಪೃಶ್ಯರನ್ನು ಹೃದಯಪೂರ್ವಕವಾಗಿ ಸ್ಪರ್ಶಿಸಲೊಪ್ಪಬೇಕಾದರೆ, ಸ್ಪೃಶ್ಯಾಸ್ಪೃಶ್ಯತೆಯು ಹಿಂದೂದೇಶದಿಂದ ನಿಜವಾಗಿಯೂ ಮಾಯವಾಗಬೇಕಾದರೆ ಮೊದಲು ಅಸ್ಪೃಶ್ಯರು ಬಡತನದಿಂದ ವಿಮುಕ್ತರಾಗಬೇಕು. ಅಸ್ಪೃಶ್ಯರು ಹಿಂದೂಗಳಲ್ಲಿ ಅತ್ಯಂತ ಬಡವರೆಂಬವರು ಸಿರಿವಂತರಾಗಬೇಕು. ಬಡತನವೆಂಬ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕು; ಎಂದರೆ ಮಾತ್ರ ನಮ್ಮ ದೇಶಧುರೀಣರ ಕಾರ್ಯಪಟುತ್ವದ ಶಕ್ತಿಯು ಕಂಡುಬರುವುದು.

ಪುಣ್ಯವಂತ(?)ರಾದ ನಮ್ಮ ಹಿರಿಯರು ಅಸ್ಪೃಶ್ಯರನ್ನು ಮೊದಲು ಬಡತನದ ಬಂಧನದಲ್ಲಿಟ್ಟರು. ಅವರು ತಮ್ಮ ಸೇವಕರಾಗಿರುವಂತೆ ಸಾವಿರಾರು ಯೋಜನೆಗಳನ್ನು ಯುಕ್ತಿಶಕ್ತಿಗಳಿಂದುಪಯೋಗಿಸಿದರು. ವ್ಯಾಪಾರ ಎಂದರ ನೆಪದಿಂದ ಬ್ರಿಟಿಷರು ಹಿಂದೂದೇಶಕ್ಕೆ ಕಾಲಿಟ್ಟು, ಕ್ರಮೇಣ ಸ್ವಾರ್ಥಪರರಾಗಿ ತಮ್ಮ ಕುಟಿಲೋಪಾಯದ ವಿಶಾಲವಾದ ಬಲೆಯನ್ನು ಇಲ್ಲಿಯವರ ಮೇಲೆ ಬೀಸಿ, ಹಾಸಿ, ಇಲ್ಲಿಯವರನ್ನು ತಮ್ಮ ಬಗಲೊಳಗೆ ಹಾಕಿಕೊಂಡಂತೆ, ಅಂದಿನ ಹಿರಿಯರು ಅಸ್ಪೃಶ್ಯರನ್ನು ಮೊದಲು ವಿದ್ಯೆ, ಬುದ್ಧಿ, ಮಣ್ಣು, ಹೊನ್ನುಗಳ ಬಡತನದ ಬೆಂಕಿಗೆ ತಳ್ಳಿಬಿಟ್ಟರು – ಇದರಿಂದಾಗಿಯೇ, ಇಂತಹ ಕ್ರೂರ ಕೌಟಿಲ್ಯದ ಪರಿಣಾಮವಾಗಿಯೇ ಇಂದು ಸ್ಪೃಶ್ಯರಾದ ಅಸ್ಪೃಶ್ಯರೂ ಕೂಡಾ ಅಸ್ಪೃಶ್ಯರಾಗಿಯೇ ಹಿಂದುಳಿಯಬೇಕಾಯಿತು. ಇದರಿಂದಾಗಿಯೇ, ಇಂತಹ ಒಂದು ಒಡಕು ಹಿಂದೂ ಸಮಾಜದಲ್ಲಿ ಧರ್ಮದ ನೆಪದಿಂದುಂಟಾದುದರಿಂದಲೇ, ಇಂದು ಹಿಂದೂದೇಶವು ಅನ್ಯರ ಪಾದವನ್ನು ಭಕ್ತಿಯಿಂದ ತೊಳೆದು ತಿಕ್ಕಿವಿಶ್ವಾಸದಿಂದ ನೀರನ್ನು ಸಂತೋಷದಿಂದ ಕುಡಿದು ಕ್ಷೀಣಿಸುತ್ತಿದೆ.

ಪತಿತಜನರ ಬಡತನವು ಕಡಿಮೆಯಾಗಬೇಕಾದರೆ ಅವರಲ್ಲಿ ನಿರುದ್ಯೋಗಿಗಳಾಗಿರುವ ಸಹಸ್ರಾರು ಸ್ತ್ರೀ ಪುರುಷ ಬಾಲರಾದಿಗಳಿಗೆ ಸ್ಪೃಶ್ಯರು ಉದ್ಯೋಗವನ್ನು ಒದಗಿಸಿಕೊಡಬೇಕು. ತಮ್ಮ ಮನೆಮಠಗಳಲ್ಲಿನ ಹೊರಗಿನ ಮತ್ತು ಒಳಗಿನ ಸಣ್ಣ ದೊಡ್ಡ ಕೆಲಸಗಳಿಗೆ ಅವರನ್ನು ಪ್ರೀತಿಪೂರ್ವಕವಾಗಿ ನಿಯಮಿಸಿ, ಸಕಾರಣವಾದ ಸಂಬಳವನ್ನು ಅವರಿಗೆ ಕೊಡಬೇಕು. ಹಣದ ಅಡಚಣೆ ಇಲ್ಲದೆ ಸಂತೋಷದಿಂದಿರುವ ಸ್ಪೃಶ್ಯರು ಹಣದಭಾವದಿಂದ ದುಃಖಿಸುತ್ತಿರುವ ಅಸ್ಪೃಶ್ಯರಿಗೆ ಉದಾರತೆಯಿಂದ ಸಹಾಯಮಾಡಬೇಕು. ಅವರ ಮದುವೆ ಜನನಮರಣಗಳೇ ಮೊದಲಾದ ಕಾರ್ಯಗಳಲ್ಲಿ ಸ್ಪೃಶ್ಯರು ಭಾಗವಹಿಸಿ ಹೆಚ್ಚಿನ ಸಂಸ್ಕೃತರಾಗದ ಜನವೃಂದಕ್ಕೆ ಆದರ್ಶಪ್ರಾಯರಾಗಬೇಕು.

HOMAGE TO THE POOR

BOW TO THE DUMB-MILLIONS–THE ENJOYERS OF NATURE.
AFTER WHOM WE ARE LOOKING FOR OUR VERY FUTURE.
DRAW THE DOWN-TRODDEN CLOSER YOUR HEART.
APPRECIATING THE PURITY OF THEIR DIVINE-PART.
VALUE THE SERVICES THEY RENDER TO HUMANITY.
AIMING TO HAIL THE BUDDING DAWN OF LIBERTY.
REALISE THAT THE SEMI-STARVED ARE FEEDING
ALL THE SLUGGISH-BEINGS WITH THEIR HEARTS BLEEDING.
BEAR IN YOUR MIND, TO BE CANDID AND KIND, UPRIGHT;
AND HONEST TO THOSE THAT ARE FIGHTING FOR THE RIGHT.
NOTE IT WELL THAT THEIR PENURY IS OUR DEGENERATION.
DISTRESS IS OUR OUGHT-RIGHT AND TOTAL DESTRUCTION,
HINDUSTAN CAN NEVER DREAM TO PROGRESS WELL
UNLESS THE TEEMING MILLIONS ARE FREED FROM THE HELL.

BY M. S. UPADYA.

ಬುದ್ಧಿವಂತನಿಗೆ ಒಂದೇ ಮಾತು ಸಾಕು.

ಸಿರಿಮದ.

ಲೇಖಕರು:—ಶ್ರೀ ಬಿ. ಡಿ. ಮಾಧವ ಬಾಳಿಗ, ಬಿ. ಎ., ಮಂಗಳೂರು.

ಪಾಲಾಡಿ ಗ್ರಾಮದ ಪಟೇಲ ತಿಮ್ಮಣ್ಣರೆಂದರೆ ಸಾಧಾರಣ ಮನುಷ್ಯರಲ್ಲ! ಅವರು ಒಂದು ಮಾತನ್ನಾಡಿದರೆ ಇಡೀ ಗ್ರಾಮವೇ ಗಡಗಡನೇ ನಡಗುವಂತಿತ್ತು. ಒಳ್ಳೇ ಧನಿಕರು! ಅಂದಮೇಲೆ ಅವರ ಮಾತಿಗೆ ಪ್ರತಿ ಮಾತನಾಡುವವರು ಯಾರೂ ಇಲ್ಲವೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ಒಂದು ವೇಳೆ ಹಾಗೆ ಯಾರಾದರೂ ಮಾತನಾಡಿದರೆ, ಅವನು ಸುರಕ್ಷಿತವಾಗಿ ಮನೆ ಸೇರುವುದೇ ಕಷ್ಟವಾಗುವುದು. ಅವರ ಕೋಪ ಅಂತಹದು! ದೊಡ್ಡ ಮುಂಡಾಸನ್ನು ತಲೆಗೆ ಸುತ್ತಿಕೊಂಡು, ಕೈಯಲ್ಲಿ ತೋರವಾದ ಒಂದು ನಾಗಬೆತ್ತವನ್ನು ಹಿಡಿದುಕೊಂಡು, ತನ್ನ ಉಗ್ರಾಣಿ ಸಹಿತ ಮನೆಯಿಂದ ಅವರು ಹೊರಬಿದ್ದರೆಂದರೆ ಸೈ! ಸುತ್ತುಮುತ್ತಲಿನ ಜನರ ಎದೆಯೊಡೆಯಲಾರಂಭಿಸುತ್ತಿತ್ತು! ತನ್ನ ಗ್ರಾಮದಲ್ಲಿ ಯಾರೊಡನೆಯಾದರೂ ಯಾವ ವಸ್ತುವೇ ಇರಲಿ, ತನಗೆ ಅಗತ್ಯವಿದ್ದರೆ ತಿಮ್ಮಣ್ಣರು ಕೂತಲ್ಲಿಂದ ಒಂದು ಕ್ಷಣದಲ್ಲೇ ಅದನ್ನು ತರಿಸಿಕೊಳ್ಳುತಿದ್ದರು. ತಿಮ್ಮಣ್ಣರು ಪಟೇಲರು, ದುಗ್ಗಮೂಲ್ಯ ಉಗ್ರಾಣಿ, ಒಳ್ಳೆಯ ಜತೆ.

ಮಧ್ಯಾಹ್ನ;—ಸಾಧಾರಣ ಎರಡು ಘಂಟೆಯಾಗಿರಬಹುದು; ತಿಮ್ಮಣ್ಣರುಗಳು ಚಾವಡಿಯಲ್ಲಿ ಒಂದು ತಗ್ಗಾದ ಮಂಚದ ಮೇಲೆ ಕುಳಿತುಕೊಂಡು ವೀಳ್ಯದೆಲೆ ಹಾಕಿಕೊಳ್ಳುತ್ತಿದ್ದರು. ಹತ್ತಿರ ದುಗ್ಗನಿದ್ದನು. ವೀಳ್ಯದೆಲೆ ಜಗಿಯುತ್ತಾ ಪಟೇಲರು:—

"ದುಗ್ಗಾ, ನವರಾತ್ರಿ ಪ್ರಾರಂಭವಾಗಿ ಹಲವು ದಿನಗಳಾದುವಲ್ಲಾ"—ದುಗ್ಗ: "ಹೌದು ಸ್ವಾಮಿ, ನಾಡದು ಶುಕ್ರವಾರ ಮುಗಿಯಲಿಕ್ಕಾಯಿತು. ಏನಾದರೂ ಹರಕೆ ಗಿರಕೆ ಇದ್ದರೆ ನಾಡದು, ಒಳ್ಳೇ ದಿನ, ಕೊಡಬೇಕು."

"ನನ್ನದೊಂದು ಹರಕೆ ಇದೆ. ನನ್ನ ಮಗ ಬಿರ್ಮಣ ಹಲವು ತಿಂಗಳ ಹಿಂದೆ ಸಿಡುಬಿನಿಂದ ಬದುಕುವುದು ಕಷ್ಟವಾಯಿತಲ್ಲ. ಆಗ ನಾನು "ಅವನು ಬದುಕಿದರೆ ಒಂದು ಕಪ್ಪು ಹೋತವನ್ನು ನವರಾತ್ರಿಯಲ್ಲಿ ಅಮ್ಮನವರಿಗೆ ಬಲಿ ಕೊಡುತ್ತೇನೆ" ಎಂದಿದ್ದೆ. ಪುಣ್ಯದಿಂದ ಮಗ ಬದುಕಿಕೊಂಡ. ಕಪ್ಪು ಹೋತವು ಸಿಗುವುದಿಲ್ಲ. ಹರಕೆ ಈಗ ಕೊಡುವುದು ಬೇಡವೇ?"

"ಸ್ವಾಮಿ, ಅವಶ್ಯವಾಗಿ ಕೊಡಬೇಕು. ಇಲ್ಲದಿದ್ದರೆ ಅಮ್ಮನವರ ದೃಷ್ಟಿ ತಿರುಗಿ ಬಿದ್ದರೆ ನಮ್ಮ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲ."

"ಆದರೆ ಕರೀ ಹೋತ ಎಲ್ಲಾದರೂ ಸಿಕ್ಕೀತೇ? ಹಲವು ರೂಪಾಯಿಗಳು ಹೋದರೂ ಚಿಂತೆಯಿಲ್ಲ."

"ರೂಪಾಯಿ ಕೊಡುವುದು ಏಕೆ ಸ್ವಾಮಿ! ತಮ್ಮ ವಕ್ಲು ಶೇಕ್ ಇಬ್ರಾಹಿಮ್‌ನಲ್ಲಿ ಒಂದು ಒಳ್ಳೇ ಕಪ್ಪು ಹೋತವಿದೆ. ಧನಿಗಳಿಗೆ ಕೊಡಲಿಕ್ಕಿಲ್ಲವೆಂದು ಎಂದಿಗೂ ಹೇಳಲಿಕ್ಕಿಲ್ಲ."

"ಹಾಂ ಹಾಗೋ! ಕಷ್ಟವೇ ಇಲ್ಲವಲ್ಲ! ಇಬ್ರಾಹಿಮ್! ಅವ ಒಳ್ಳೇ ವಕ್ಲು. ಅವನನ್ನು ಈಗಲೇ ಬರಹೇಳು."

ದುಗ್ಗನು ತನ್ನ ದುಸ್ತನ್ನು ಸರಿಪಡಿಸಿ, ಕೈಯಲ್ಲಿ ಬೆತ್ತವನ್ನು ಹಿಡಿದುಕೊಂಡು ದಾರಿಯುದ್ದಕ್ಕೂ ಒಳ್ಳೇ ಅಬ್ಬರದಿಂದ ನಡೆಯುತ್ತಾ ಹೊರಟನು. ಪಟೇಲರ ಉಗ್ರಾಣಿ ಬಂದನೆಂದರೆ ಜನರು ಬೆಚ್ಚಿಬೀಳುತ್ತಿದ್ದರು. ಇಬ್ರಾಹಿಮನು ಗದ್ದೆಯಿಂದ ಓಡಿ ಬಂದು "ಏನು ಸಮಾಚಾರ?" ಎಂದು ಪ್ರಶ್ನಿಸಿದನು.

"ಏನಿಲ್ಲ, ಧನಿಗಳು ನಿನ್ನನ್ನು ಬರಹೇಳಿದ್ದಾರೆ. ಹೊತ್ತು ಕಳೆಯಬೇಡ" ಎದೆಯು ಧಡ್ ಧಡ್ ಎನ್ನುತ್ತಿರಲು ಇಬ್ರಾಹಿಮನು ಕ್ಷಣದಲ್ಲಿಯೇ ಮನೆಯಿಂದ ಹೊರಬಿದ್ದನು.

ದಾರಿಯಲ್ಲಿ ದುಗ್ಗನು "ನೋಡು, ನಮ್ಮ ಪಟೇಲರ ಹಾವಳಿ. ಇಲ್ಲದಿದ್ದರೆ ಬೇಕಾದಷ್ಟು ಹೋತಗಳು ಇಲ್ಲಿ ಸಿಕ್ಕುವಾಗ ನಿನ್ನ ಹೋತದ ಮೇಲೆ ಅವರ ಕಣ್ಣು ಬೀಳಬೇಕೇ?"

"ಅಯ್ಯೋ! ಧನಿಗಳಿಗೆ ನನ್ನ ಹೋತ ಬೇಕಾಗಿದೆಯೋ? ಅದು ನನ್ನ ಪ್ರೀತಿಯ ಹೋತ. ಚಿಕ್ಕ ಮರಿಯಾದಂದಿನಿಂದ ಸಾಕಿ ದೊಡ್ಡದಾಗಿ ಮಾಡಿರುತ್ತೇನೆ ನನ್ನ ಪೀರನನ್ನು ಹೇಗೆ ಕೊಡಲಿ? ಕೊಡದಿದ್ದರೆ ವಿಪತ್ತನ್ನು ಮನೆಬಾಗಿಲಿಗೆ ಕರದಂತಾಗುತ್ತದೆ! ಕ್ಯಾ ಕರೂಂ"

"ಬಡವರನ್ನು ಹಿಂಸಿಸುವುದೇ ಗೊತ್ತು ನಮ್ಮ ಧನಿಗಳಿಗೆ!" "ನನಗೆ ಅಷ್ಟೊಂದು ಬೇಸರವಾಗುತ್ತಿದ್ದಿಲ್ಲ; ನನ್ನ ಮಗ ಹುಸ್ಸೇನನು ಪೀರನಿಗೋಸ್ಕರ ಜೀವವನ್ನು ಕಳಕೊಳ್ಳುತ್ತಾನೆ. ಒಂದು ಕ್ಷಣ ಸಹ ಅದನ್ನು ಅಗಲಿರಲಾರ."

ಇಷ್ಟರಲ್ಲಿ ಪಟೇಲರ ಚಾವಡಿಯು ಸಮೀಪಿಸಿತು. ಇಬ್ರಾಹಿಮನು ಬಗ್ಗಿ ಸಲಾಂ ಮಾಡಿದನು.

ಪಟೇಲ:—"ಇಬ್ರಾಹಿಮ್! ನಮಗೊಂದು ಕಪ್ಪು ಹೋತ ಬೇಕಾಗಿದೆ. ನಿನ್ನ ಮನೆಯಲ್ಲಿ ಇದೆಯಲ್ಲಾ? ಅದನ್ನು ಈಗಲೇ ತಂದುಕೊಡು. ಅಮ್ಮನವರಿಗೆ ಒಂದು ಹರಕೆ ಇದೆ."

ಇಬ್ರಾಹಿಮ್:—ಇದೇ ಬುದ್ಧೀ, ಆದರೆ.....

"ಆದರೇನು?"

"ಅದು ನನ್ನ ಮಗನ ಪ್ರೀತಿಯ ಹೋತ ಸ್ವಾಮಿ; ಶಾಲೆಯಿಂದ ಬಂದ ನಂತರ ಯಾವಾಗಲೂ ಅವನು ಅದರೊಟ್ಟಿಗೆ ಆಡುತ್ತಾನೆ. ಒಂದು ಕ್ಷಣವಾದರೂ ಅದನ್ನು ಬಿಟ್ಟಿರುವುದಿಲ್ಲ. ಅದನ್ನು ಕಳೆದುಕೊಳ್ಳುವುದೆಂದರೆ ಅವನ ಪ್ರಾಣವೇನೂ ನಿಲ್ಲದು."

"ಅಷ್ಟೇನೆ! ಅವನಿಗೆ ಸವಿಯಾದ ಲಡ್ಡುಗಳನ್ನು ಕೊಟ್ಟರೆ ಸರಿ. ಕೇಳುತ್ತಾನೆ. ಮಕ್ಕಳಿಗೆ ತಿಂಡಿ ಸಿಕ್ಕಿದರಾಯಿತು. ಯಾವುದಕ್ಕೂ ಒಪ್ಪುತ್ತಾರೆ. ಕುಣಿಯ ತಿಳಿಯದವನು ಅಂಗಳ ವಾರೆ ಎಂದಂತೆ,—ಮನಸ್ಸಿಲ್ಲದ ನೀನು.....!

"ಹಾಗಲ್ಲ ಬುದ್ಧಿ, ನನ್ನ ಮಗನು ಹಾಗಿಲ್ಲ. ಅವನಿಗೆ ಹೋತವಲ್ಲದೆ ಬೇರಾವ ವಸ್ತೂ ಬೇಕಾಗಿಲ್ಲ."

"ಹಾಗೊ, ತಿಂಡಿ ಬೇಡಾದರೆ ಒಳಿತಾಗಿ ನಾಲ್ಕು ಕಾಯಿಸಿದರಾಯಿತು. ಸುಮ್ಮನೆ ಕೂತುಕೊಳ್ಳುತ್ತಾನೆ ಒಂದು ಮೂಲೆಯಲ್ಲಿ. ದುಗ್ಗಾ ನಡೆ ಇವನೊಡನೆ, ಹೋತವನ್ನು ಬೇಗ ತೆಗೆದುಕೊಂಡು ಬಾ."

ಇಬ್ರಾಹಿಮನು ದುಗ್ಗನನ್ನು ಕರೆದುಕೊಂಡು ಹೋದನು.

ಮೂರು ಅಡಿ ಎತ್ತರವಿರುವ ಶರೀರ, ಒಂದುವರೆ ಅಡಿ ಉದ್ದವಿರುವ ಗಡ್ಡ, ಸುಂದರವಾದ ಕೋಡುಗಳು, ಆ ಕಪ್ಪಾದ ಮುಖದಲ್ಲಿ ಕತ್ತಲೆಯಲ್ಲಿನ ದೀಪದಂತೆ ಥಳಥಳಿಸುವ ಕಣ್ಣುಗಳು, ಹುಟ್ಟಿದಂದಿನಿಂದ ಇಬ್ರಾಹಿಮನ ಕೈಯಲ್ಲೇ ದೊಡ್ಡದಾದುದು. ಇಂಥಾ ಹೋತವನ್ನು ಕೊಡಲು ಯಾರಿಗೆ ತಾನೇ ಬೇಸರವಾಗದಿರದು?

ತನ್ನ ಯಜಮಾನನನ್ನು ನೋಡುತ್ತಲೇ ಹೋತವು "ಮೇ ಮೇ" ಎಂದು ಕೂಗುತ್ತ ತನ್ನ ಮುಂಗಾಲುಗಳನ್ನು ಎತ್ತುತ್ತಲೂ, ತನ್ನ ಮೈಯನ್ನು ಯಜಮಾನನ ಮೈಗೆ ಸವರುತ್ತಲೂ ಸ್ನೇಹವನ್ನು ತೋರಿಸ ತೊಡಗಿತು. ಇಬ್ರಾಹಿಮನು ಬೇಟಾ, ಪೀರಾ, ನೀನೇಕೆ ನನ್ನ ಮನೆಯಲ್ಲಿ ಜನ್ಮಕ್ಕೆ ಬಂದೆ? ನೀನು ಬೇರೊಂದು ಕಡೆಯಲ್ಲಿ ಹುಟ್ಟಿದುದಾದರೆ, ಒಳ್ಳೆಯದಿತ್ತು! ಇನ್ನು ನೀನೆಲ್ಲಿ? ನಿನ್ನ ಪ್ರೀತಿಯ ಹುಸ್ಸೇನನೆಲ್ಲಿ? "ಯಾ ಅಲ್ಲಾ" ಎಂದು ಅದನ್ನಪ್ಪಿಕೊಂಡು ಕಣ್ಣೀರು ಸುರಿಸಿ ದುಃಖಿಸಿದನು. ಆ ಮೂಕಪ್ರಾಣಿಯು ಯಜಮಾನನ ದುಃಖದಲ್ಲಿ ಸಹಭಾಗಿಯಾಯಿತೋ ಎಂಬಂತೆ ಅವನನ್ನು ಎವೆಯಿಕ್ಕದೆ ನೋಡುತ್ತಿತ್ತು. ಅಷ್ಟರಲ್ಲಿ ದುಗ್ಗನು ಅದರ ಕೊರಳಿಗೆ ಹಗ್ಗವನ್ನು ಕಟ್ಟಿದನು. ಅದು ತಲೆಯನ್ನು ಕೊಸರುತ್ತ ಬಿಡಿಸಿಕೊಳ್ಳಲು ಪ್ರಯತ್ನಿ

ಒಳ್ಳೆಯ ನಗೆಯು ಮನೆಯನ್ನು ಬೆಳಗಿಸುತ್ತದೆ.

ಸಿತು. ಉಗ್ರಾಣಿಯು ಅದನ್ನು ದರದರನೆ ಎಳೆದುಕೊಂಡು ಹೋದನು. ಇಬ್ರಾಹಿಮನು ಹಿಂದೆ ನೋಡುತ್ತ ಮೆಲ್ಲಮೆಲ್ಲನೆ ಮನೆಯನ್ನು ಹೊಕ್ಕನು.

ದುಗ್ಗನು ಹೆಚ್ಚು ದೂರ ಹೋಗಲಿಲ್ಲ. ಅಷ್ಟರಲ್ಲಿ ಹಿಂದಿನಿಂದ "ನನ್ನ ಪೀರಾ! ನನ್ನ ಪೀರಾ!" ಎಂದು ಯಾರೋ ಕೂಗುವುದು ಕೇಳಿಸಿತು. ಹಿಂತಿರುಗಿ ನೋಡಲು, ಕೊರಳಲ್ಲಿ ಪುಸ್ತಕಗಳ ಚೀಲವನ್ನು ನೇತಾಡಿಸಿಕೊಂಡು ಎಂಟು ವರುಷದ ಹುಡುಗನೊಬ್ಬನು ಓಡಿಬರುತ್ತಿದ್ದನು. ಈ ಪರಿಚಿತವಾದ ಸ್ವರವನ್ನು ಕೇಳುತ್ತಲೇ ಹೋತವು "ಮೇ ಮೇ" ಎಂದು ಕೂಗುತ್ತ ಚಡಪಡಿಸಿ ದುಗ್ಗನನ್ನು ಹಿಂದಕ್ಕೆಳೆಯಿತು. ಹುಸ್ಸೇನನು ಪೀರನನ್ನು ಅಪ್ಪಿಕೊಳ್ಳುತ್ತ, "ಪೀರಾ, ನನ್ನನ್ನು ಬಿಟ್ಟು ಇವರೊಡನೆ ಎಲ್ಲಿಗೆ ಹೋಗುತ್ತಿ? ಉಗ್ರಾಣಿಗಳೇ! ನನ್ನ ಪೀರನನ್ನು ಎಲ್ಲಿಗೆ ಎಳೆದುಕೊಂಡು ಹೋಗುತ್ತೀರಿ? ಅವನನ್ನು ಬಿಡಿರಿ. ಮನೆಗೆ ಕರೆದುಕೊಂಡು ಹೋಗುತ್ತೇನೆ. ನೋಡಿ, ನನ್ನ ಪೀರಾ ಮನೆಬಿಟ್ಟು ಹೋಗಲು ಎಷ್ಟು ದುಃಖಪಡುತ್ತಿದ್ದಾನೆ! ಅಯ್ಯೋ!"

ದುಗ್ಗನು "ಮಗೂ ಪೀರನನ್ನು ಕರೆದುತರಬೇಕೆಂದು ಧನಿಯವರ ಅಪ್ಪಣೆಯಾಗಿದೆ. ಈಗ ನಾನು ಚಾವಡಿಗೆ ಹೋಗುತ್ತೇನೆ" ಎಂದು ದರದರನೆ ಅದನ್ನು ಎಳೆದುಕೊಂಡು ಹೋದನು. ಹುಡುಗನು ಹೋತನನ್ನು ಹಿಂಬಾಲಿಸುತ್ತಾ ಹೋದನು.

ಚಾವಡಿಯು ಸಮೀಪಿಸಿತು. ಪಟೇಲರು ಒಂದು ಜಮಖಾನಿನ ಮೇಲೆ ಕುಳಿತು ಒಂದು ಕೈಯಿಂದ ನಸ್ಯವನ್ನು ಸೇವಿಸುತ್ತಲೂ ಇನ್ನೊಂದು ಕೈಯಿಂದ ಅಬ್ಬರದಿಂದ ಮೀಸೆಯನ್ನು ತಿರುವುತ್ತಲೂ ಇದ್ದರು.

"ಏನು? ಹೋತ ಸಿಕ್ಕೀತೆ!"

"ಸಿಕ್ಕಿತು. ಆದರೆ ಈ ಪಿಳ್ಳೆಯು ಹೋತ ಕೊಡಬೇಕೆಂದು ಚಂಡಿಹಿಡಿಯುತ್ತದಲ್ಲಾ. ಹೋತದೊಡನಲ್ಲದೆ ಮನೆಗೆ ಹೋಗಲಿಕ್ಕಿಲ್ಲವೆಂದು ಅಳುತ್ತಾನೆ."

"ಏನೋ ಹುಸ್ಸೇನ್, ಈ ಹೋತ ತೆಗೆದುಕೊಂಡು ಏನು ಮಾಡುತ್ತಿಯೋ?"

"ಸ್ವಾಮೀ ಧನಿಗಳೇ, ಅದು ನನಗೆ ಬೇಕು. ಅದರೊಡನೆ ಯಾವಾಗಲೂ ನಾನು ಆಡುತ್ತೇನೆ."

"ಇಲ್ಲಿ ಬಾ, ಸ್ವಲ್ಪ ಮಿಠಾಯಿ ತೆಗೆದುಕೊ, ಅದನ್ನು ತಿಂದು ನೆಮ್ಮದಿಯಿಂದ ಮನೆಗೆ ಹೋಗು. ಹೋತ ನನಗೆ ಬೇಕು."

"ನನಗೆ ಮಿಠಾಯಿ ಬೇಡ, ಯಾವುದೂ ಬೇಡ ನನ್ನ ಪೀರನನ್ನು ಕೊಟ್ಟುಬಿಡಿ."

"ಏನು ಪೀರನನ್ನು ಕೊಡಬೇಕೆ? ನಡೆ ಇಲ್ಲಿಂದ ಈಗಲೆ! ಇಲ್ಲದಿದ್ದರೆ...... ...." ಎನ್ನುತ್ತ ಕೋಪದಿಂದ ಹುಡುಗನನ್ನು ಎಳೆದು ದೂರ ನಿಲ್ಲಿಸಿದನು. ಹುಡುಗನು ಆನೆಯಿಂದ ಎಳೆಯಲ್ಪಟ್ಟ ಬಾಳೆ ಗಿಡದಂತೆ ಹೆಜ್ಜೆ ತಪ್ಪಿದನು. "ನಾಯಿ ಮರಿ, ಹೇಳಿದ್ದು ಕೇಳುವುದಿಲ್ಲಾ, ಕಟ್ಟೋ ಹಟ್ಟಿಯಲ್ಲಿ ಹೋತವನ್ನು! ಇವನ ಸಮಾಚಾರ ಮತ್ತೆ ನೋಡೋಣವಂತೆ!!"

× × × × × × × ×

"ಅಪ್ಪಾ, ಪೀರನಿಲ್ಲದಿದ್ದರೆ ನಾನು ಶಾಲೆಗೆ ಹೋಗುವುದಿಲ್ಲ. ಪೀರನನ್ನು ತಂದುಕೊಡು"

"ಪೀರನನ್ನು ಎಲ್ಲಿಂದ ತರಲಿ ಮಗೂ? ಧನಿಗಳ ಬಳಿಗೆ ಈಗ ಹೋದರೆ ನನ್ನ ಎಲುಬುಗಳು ಪುಡಿಪುಡಿಯಾದಾವು!"

"ನನ್ನ ಪೀರಾ, ಅಯ್ಯೋ ನನ್ನ ಪೀರಾ, ನಿನಗೆ ಧನಿಗಳು ಎಷ್ಟು ಹೊಡೆಯುತ್ತಾರೋ ಈಗ!"

ಎರಡು ದಿನಗಳು ಕಳೆದುವು, ಹುಸ್ಸೇನನು ಶಾಲೆಗೆ ಹೋಗಲಿಲ್ಲ. ಪೀರನ ಅಗಲುವಿಕೆಯಿಂದ ಒಮ್ಮಿಂದೊಮ್ಮೆ ಆ ಹುಡುಗನ ಶರೀರದಲ್ಲಿ ಒಂದು ಜಾಡ್ಯವು ತಲೆದೋರಿತು. ಸ್ವಲ್ಪ ಸ್ವಲ್ಪ ಜ್ವರವೂ ಬರಲು ಪ್ರಾರಂಭವಾಯಿತು. ತಾಯಿಯು ದುಃಖಿತಳಾದಳು. ಎಷ್ಟು ಪ್ರಯತ್ನ ಮಾಡಿದರೂ ಹುಡುಗನು ಪೀರನ ಹಂಬಲವನ್ನು ಬಿಡುವಂತಿಲ್ಲ. ನಿದ್ದೆಯಿಂದ ಎಚ್ಚತ್ತು "ನನ್ನ ಪೀರಾ, ನನ್ನ ಪೀರಾ" ಎಂದು ಹೌಹಾರಿ ಅಳತೊಡಗುವನು. ಒಮ್ಮೊಮ್ಮೆ "ಅಮ್ಮಾ, ಪೀರನೆಲ್ಲಿದ್ದಾನೆ ಹೇಳು; ಇಲ್ಲದಿದ್ದರೆ ಮದ್ದುಕುಡಿಯುವುದಿಲ್ಲ" ಎಂದು ತಾಯನ್ನು ಪೀಡಿಸುವನು. ಕ್ಷಣಕ್ಷಣಕ್ಕೂ ಅವನ ಸ್ಥಿತಿಯು ಕೆಡುತ್ತಾ ಬಂತು.

ಇಂದು ಶುಕ್ರವಾರ. ನವರಾತ್ರಿಯ ಕೊನೆಯ ದಿನ. ಸಾಯಂಕಾಲದ ಸಮಯ. ಹುಸ್ಸೇನನು ತಾಯಿಯ ತೊಡೆಯಲ್ಲಿ ನಿದ್ರಿಸುತ್ತಿದ್ದಾನೆ. ಉಗ್ರಾಣಿ ದುಗ್ಗನು ಒಮ್ಮಿಂದೊಮ್ಮೆ ಮನೆಗೆ ಬಂದೇ ಬಿಟ್ಟನು. ಇಬ್ರಾಹಿಮನು ಇನ್ನು ಎಂತಹ ಆಪತ್ತು ನನ್ನ ತಲೆಯ ಮೇಲೆ ಬರಲಿಕ್ಕಿರುವುದೋ ಎಂದು ಕಳವಳಿಸುತ್ತಿರಲು ದುಗ್ಗನು ಮಾಂಸದ ಒಂದು ಕಟ್ಟನ್ನು ಮುಂದೆ ತಂದಿಟ್ಟನು. "ಇಕೊಳ್ಳಿ. ಇದನ್ನು ಧನಿಗಳು ಕಳುಹಿಸಿದ್ದಾರೆ. ದೇವಿಯ ಪ್ರಸಾದ. ಇದರಿಂದ ನಿಮಗೆ ಕ್ಷೇಮವಾಗುತ್ತದೆ" ಎಂದು ಒಂದು ಕ್ಷಣವೂ ನಿಲ್ಲದೆ ಹೊರಟುಹೋದನು. ಇಬ್ರಾಹಿಮನಾಗಲಿ ಅವನ ಹೆಂಡತಿಯಾಗಲಿ ಪಿಟ್ಟೆಂದು ಮಾತಾಡಲಿಲ್ಲ. ಅವರಿಗೆ ಅದು ಪೀರನ ಮಾಂಸವೆಂದು ತಿಳಿಯಿತು. ಪೀರನು ಅಮ್ಮನವರಿಗೆ ಬಲಿಯಾದನು. ಹೊಟ್ಟೆಯ ಮಗನಂತಿದ್ದ ಹೋತನ ಮಾಂಸವನ್ನು ಯಾರು ತಾನೇ ತಿಂದಾರು? ದುಗ್ಗನು ಹೇಳಿದಂತೆ ಅವರಿಗೆ ಕ್ಷೇಮವಾಗಲಿಲ್ಲ; ಆದರೆ ದುಃಖವಾಯಿತು. ಹುಸ್ಸೇನನು ನಿದ್ದೆಯಿಂದ ಎಚ್ಚತ್ತು ಇದಿರಿನಲ್ಲಿದ್ದ ಮಾಂಸದ ಕಟ್ಟನ್ನು ನೋಡಿದನು. "ಅಪ್ಪಾ, ಅದು ಮಾಂಸವೆಲ್ಲಿಯದು?"

ಇಬ್ರಾಹಿಮ್ "ಅದು ಧನಿಗಳ ಮನೆಯಿಂದ ಈಗ ತಾನೇ ಬಂದದ್ದು. ದೇವಿಯ ಪ್ರಸಾದವಂತೆ."

ಈ ಮಾತುಗಳನ್ನು ಕೇಳಿದೊಡನೆ ಆ ಹುಡುಗನು ಗೋಳೋ ಎಂದು ಅತ್ತುಬಿಟ್ಟನು. "ಯಾ ಅಲ್ಲಾ! ನನ್ನ ಪೀರನು ಸತ್ತನು. ನನ್ನ ಪೀರಾ! ನನ್ನನ್ನು ಬಿಟ್ಟು ಹೋದೆಯಾ? ಇನ್ನು ನಾನು ಯಾರನ್ನು ಪ್ರೀತಿಸಲಿ? ಯಾರೊಡನೆ ಆಡಲಿ?" ಪೀರಾ! ಪೀರಾ! ಎಂದು ಬಿಕ್ಕಿ ಬಿಕ್ಕಿ ಅಳುತ್ತಾ ನಿದ್ದೆಹೋದನು.

ಮಧ್ಯರಾತ್ರಿ, ಒಂದು ಹಣತೆಯ ಪ್ರಕಾಶದಲ್ಲಿ ಇಬ್ರಾಹಿಮನ ಹೆಂಡತಿಯು ಎಚ್ಚರದಲ್ಲಿದ್ದಾಳೆ. ಹುಸ್ಸೇನನು ಒಮ್ಮಿಂದೊಮ್ಮೆ ನಿದ್ದೆಯಲ್ಲಿ "ನನ್ನ ಪೀರಾ! ಯಾ ಅಲ್ಲಾ ನನ್ನ ಪೀರಾ!" ಎಂದು ಅರಚಿಕೊಳ್ಳುತ್ತಿದ್ದಾನೆ. ಇಬ್ರಾಹಿಮನು ಎಚ್ಚತ್ತನು. ಹುಡುಗನ ಹಣೆಯ ಮೇಲೆ ಕೈಯಿಡಲು,—ಕೆಂಡದಂತೆ ಬಿಸಿಯಾಗಿತ್ತು. ಬೆಳಗಾದರೂ ಜ್ವರವು ಇಷ್ಟಾದರೂ ಇಳಿಯಲಿಲ್ಲ.

× × × × × × ×

ರಾತ್ರೆ ಒಂದು ಘಂಟೆಯಾಗಿತ್ತು. ಇಬ್ರಾಹಿಮನು ಹುಸ್ಸೇನನ ಹಣೆಯ ಮೇಲೆ ಕೈಯಿಟ್ಟಿದ್ದಾನೆ. ನಿಮಿಷ ನಿಮಿಷದಲ್ಲಿ ತಣ್ಣಗಾಗುವ ತನ್ನ ಪ್ರಿಯ ಪುತ್ರನ ಮರಣಕಾಲವನ್ನು ಇದಿರುನೋಡುತ್ತಿದ್ದಾನೆ. ಕಗ್ಗತ್ತಲೆಯಿಂದಾವೃತವಾದ ಅಂಗಳದಲ್ಲಿ ನಾಯಿಯೊಂದು ಬಹಳ ರೋಷದಿಂದ ಬೊಗಳುತ್ತಿದೆ. ಅಂಗಳದಲ್ಲಿ ಅದು ಯಾರನ್ನೋ ಕಂಡು ಬೊಗಳುತ್ತಿದ್ದಂತೆ ಭಾಸವಾಗುತ್ತಿತ್ತು. ಹುಸ್ಸೇನನ ಬಾಗಲಲ್ಲಿ ಪಾಶವನ್ನು ಹಿಡಿದುಕೊಂಡು ನಿಂತಿರುವ ಯಮರಾಯನನ್ನು ಕಂಡು ನಾಯಿಯು ಬೊಗಳುತ್ತಿರಬಹುದು. ಅರ್ಧ ಘಂಟೆ—ಹುಸ್ಸೇನನು ಯಮನ ಪಾಶದಿಂದ ಬಂಧಿತನಾದನು.

++ + ++

ಭಿಕ್ಷೆ ಕೊಟ್ಟವನು ಬಡವನಾಗುವುದಿಲ್ಲ.

ಹೀಗೂ ಉಂಟಲ್ಲವೇ?

ಲೇ:—ಶ್ರೀ. ಅ. ರಾ. ಚಂದ್ರ, ಪೂನ.

"ನೀವು ಖಾದಿ ಧರಿಸಬಾರದು, ಅಷ್ಟೆ!"

"ಛೆ! ಅದು ಹೇಗೆ ಸಾಧ್ಯ?"

"ನನಗಾಗಿ ಆ ಗಾಂಧಿಟೋಪಿಯನ್ನು ಧರಿಸಬಾರದು"

"ಅದು ತೀರಾ ಅಸಾಧ್ಯ!"

"ಸಾರ್ವಜನಿಕ ಭಾಷಣಗಳನ್ನು ಕೊಡಬಾರದು"

"ಅದು ಕೂಡಾ ಸಾಧ್ಯವಿಲ್ಲ"!

"ಹಾಗಾದರೆ, ನನ್ನ ತಂದೆಯವರು ನಮ್ಮ ವಿವಾಹಕ್ಕೊಪ್ಪುವಂತಿಲ್ಲ. ನಮ್ಮ ವಿವಾಹದ ಕುರಿತು ಅವರು ಮೊನ್ನೆ ಸಂಜೆ ತಾಯಮ್ಮನವರೊಡನೆ ಮಾತನಾಡುತ್ತಾ, ನೀವು ಗಾಂಧೀ ಗಲಾಟೆಗೆ ಕೈಹಾಕುತ್ತಿರುವುದನ್ನು ನಿಲ್ಲಿಸದೆ ನನ್ನ ವಿವಾಹವನ್ನು ನಿಮ್ಮೊಡನೆ ಮಾಡಲು ಸಾಧ್ಯವಿಲ್ಲವೆಂದು ಕಂಠೋಕ್ತವಾಗಿ ಹೇಳಿರುವರು. ನಾನೇನು ಮಾಡಲಿ?"

"ಹೌದು ಜಲಜ—ನಿನ್ನ ಸ್ಥಿತಿಯನ್ನು ನಾನು ಬಲ್ಲೆ. ಆದರೆ ನಾನೇನು ಮಾಡಲಾಪೆ? ದೇಶೀಯ ಕಾರ್ಯದಲ್ಲಿ ಹಿಂದೆ ನಿಲ್ಲಲು ನನ್ನ ಅಂತರಾತ್ಮವು ಸಮ್ಮತಿಸುವುದಿಲ್ಲ. ನಿನ್ನನ್ನು ನನ್ನವಳನ್ನಾಗಿ ಮಾಡಬೇಕೆಂದು ನನ್ನ ಜೀವನದ ಅದೊಂದು ಹಂಬಲ. ನೀನೇ ನನ್ನ ಜೀವಜೀವಾಳ. ಆದರೆ ನನ್ನ ದೇಶಪ್ರೇಮವಾಹಿನಿಯು ನಿನ್ನ ಮೇಲಿನ ಪ್ರೇಮದಿಂದಾಗಿ ತಟಸ್ಥವಾಗಲಾರದು. ನೀನು ನನ್ನ ಮೇಲಿನ ಪ್ರೇಮದಿಂದ ಎಷ್ಟೊಂದು ಕಾತರಳಾಗುತ್ತಿರುವೆಯೋ, ಅದಕ್ಕಿಂತ ಸಹಸ್ರ ಪಾಲಷ್ಟು ನಮ್ಮ ದೇಶದ ಬಡಬಗ್ಗರು ಬಳಲುತ್ತಿರುವರು. ನಿಮ್ಮಂತಹ ಶ್ರೀಮಂತರಿಗೆ ಈ ವಿಷಯದ ಅರಿವಿಲ್ಲದಿದ್ದರೆ ಅದು ನಿಮ್ಮ ತಪ್ಪಲ್ಲ. ಹೊಟ್ಟೆಗೆ ಸರಿಯಾಗಿ ಅನ್ನವಿಲ್ಲದೆ, ಉಡಲು ಮೈತುಂಬ ಬಟ್ಟೆಬರೆಗಳಿಲ್ಲದೆ, ಬೆಂದು ಬೆಂಡಾಗುತ್ತಿರುವ ಸಹಸ್ರಗಟ್ಟಳೆ ಬಡ ಕುಟುಂಬಗಳ ದುಃಸ್ಥಿತಿಯ ಕುರಿತು ಸಿರಿವಂತರೇನರಿವರು? ಖಾದಿಯನ್ನುಡಬಾರದಂತೆ! ಗಾಂಧಿ ಟೋಪಿಯನ್ನು ಧರಿಸಿಕೊಳ್ಳಕೂಡದಂತೆ!! ಸಾರ್ವಜನಿಕ ಭಾಷಣಗಳನ್ನು ಮಾಡಬಾರದಂತೆ!!! ಇವೆಲ್ಲಕ್ಕೂ ಒಪ್ಪಲು ನನ್ನಿಂದಸಾಧ್ಯ. ಆ ಖಾದಿಬಟ್ಟೆಯೇ ಬಡವರ ಕಾಮಧೇನು! ಆ ಗಾಂಧಿ ಟೋಪಿಯೇ ಪಾವನತೆಯ ಚಿಹ್ನೆ!! ಸಾರ್ವಜನಿಕ ಭಾಷಣಗಳೇ ಜನಚೈತನ್ಯಕ್ಕೆ ಪಂಚಾಂಗ!!! ಸಾಕ್ಷಾತ್ ಲಕ್ಷ್ಮಿಯೇ ಮುನಿಯಲಿ, ವಿದ್ಯಾಧಿದೇವತೆಯಾದ ಸರಸ್ವತಿಯೇ ಕೊಲಗಲಿ, ನಾನು ನನ್ನ ಜನರ, ನನ್ನ ದೇಶದ ಬಡ ಭಾರತೀಯರ ಶ್ರೇಯೋಭಿವೃದ್ಧಿಗೆ ಕಂಟಕಪ್ರಾಯವಾಗಲಾರೆನು! ನಮ್ಮ ಜನರ ಭಾವೀಸುಖಕ್ಕೆ ಈ ದೊರಗು ಖಾದಿ ಬಟ್ಟೆಯೇ ಮೂಲಸಾಧನವು. ಮಹಾತ್ಮರು ಇದನ್ನು ಹಲವು ವರ್ಷಗಳ ತಪಶ್ಚರ್ಯೆಯಿಂದಾಗಿ ಕಂಡುಕೊಂಡಿರುವರು. ಈ ಖಾದಿಯಿಂದಲೇ ದರಿದ್ರಸೇವೆಯಾಗುವುದು, ಈ ಖಾದಿಯಿಂದಲೇ ದೇಶಸೇವೆ ಮತ್ತು ಈಶಸೇವೆಯಾಗುವುದು. ಪ್ರಿಯೆ, ನನಗೆ ನೀನೂ ಬೇಕು ದೇಶವೂ ಬೇಕು."

ಜಲಜಾಕ್ಷಿಯು ಪುನೆಯ ಸುಪ್ರಸಿದ್ಧ ವಕೀಲರಾದ ರಾವುಬಹದ್ದೂರ್ ಸುಶೀಲಚಂದ್ರರ ಏಕಮಾತ್ರ ಪುತ್ರಿ; ಸುಶಿಕ್ಷಿತೆ—ಉಮೇಶ್ಚಂದ್ರನು ವಕಾಲತು ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಆನಂದವಾರ್ತೆಯನ್ನು ಕೇಳಿ ಸುಶೀಲಚಂದ್ರರು, ಅವನನ್ನು ಮನೆಗೆ ಕರೆದು, ಒಂದು ಸತ್ಕಾರವನ್ನು ಮಾಡಿ ಗೌರವಿಸಿದ್ದರು. ಆ ಸತ್ಕಾರದ ದಿನವೇ ಜಲಜಾಕ್ಷಿ ಉಮೇಶ್ಚಂದ್ರರ ದೃಷ್ಟಿಗಳು ಒಂದಾದುದು.

ಜಲಜಾಕ್ಷಿ ಉಮೇಶ್ಚಂದ್ರರೊಳಗೆ ಅಂಕುರಿಸಿದ ಪ್ರೇಮದ ಚಿಹ್ನೆಯು ರಾವುಬಹದ್ದೂರರಿಗೆ ಕಂಡುಬರದಿರಲಿಲ್ಲ. ಆದರೂ ಭಾವೀ ಜಾಮಾತನು ಉಮೇಶ್ಚಂದ್ರನೇ ಆದರುತ್ತಮವೆಂದು ಅವರು ಅಂದು ನೆನಸಿದ್ದರು. ಕಾಲಕ್ರಮೇಣ ಅವನು ರಾಷ್ಟ್ರೀಯವಾದಿಯಾಗಿ ಮಾರ್ಪಡುವನೆಂದು ಅವರು ತಿಳಿದಿರಲಿಲ್ಲ. ಸ್ವಕುಟುಂಬ ಪೋಷಣೆಯೇ ಸುಶೀಲಚಂದ್ರರ ಮುಖ್ಯ ಗುರಿ. ಅದಕ್ಕಾಗಿ ಅವರು ಏನನ್ನು ಮಾಡಲೂ ಹಿಂಜರಿಯುತ್ತಿದ್ದಿಲ್ಲ. ಬಡಬಗ್ಗರು, ರಾಷ್ಟ್ರಸೇವಾಸಕ್ತರು, ಅವರ ಬಳಿ ಬಂದು ಕೈನೀಡಿದರೆ, ಆ ಕೈಗೆ ಒಂದು ಮುಷ್ಟಿ ಮಣ್ಣೆರಚುವುದಕ್ಕೆ ಅವರು ತಿಲಮಾತ್ರವೂ ಹೇಸುತ್ತಿದ್ದಿಲ್ಲ. ಇತ್ತಿತ್ತಲಾಗೆ ಏಕೋ ಅವರಿಗೆ ರಾವುಬಹದ್ದೂರ್ ಬಿರುದೂ ಸಿಕ್ಕಿಬಿಟ್ಟಿತು!

ಉಮೇಶ್ಚಂದ್ರನು ಖಾದಿ ಧರಿಸಿ, ಖಾದಿಪ್ರಚಾರ, ಸಾರ್ವಜನಿಕ ಭಾಷಣಗಳನ್ನು ಮಾಡುತ್ತಾ ತನ್ನ ವಿದ್ಯೆಯ ಗೌರವವನ್ನು ಮರೆತಿರುವುದನ್ನು ಕಂಡು, ಸುಶೀಲಚಂದ್ರರು ಬೆಚ್ಚಿಬಿದ್ದರು. ತನ್ನ ಬಿರುದುಬಾವಲಿಗಳಿಗೆ, ದೊಡ್ಡ ಅಧಿಕಾರಿಗಳಲ್ಲಿ ತನಗೆ ದೊರೆಯುವ ಮಾನಮರ್ಯಾದೆಗಳಿಗೆ, ಎಲ್ಲಿ ತೊಂದರೆಯುಂಟಾಗುತ್ತದೋ ಎಂದು ಅವರು ದಿಗಿಲಾದರು. ಮಗಳನ್ನು ಈಚೆಗೆ ಕರೆದು ಉಮೇಶ್ಚಂದ್ರನ ಸಹವಾಸವನ್ನು ಕೂಡಲೇ ತ್ಯಜಿಸಬೇಕೆಂದು ಬೋಧಿಸಿದರು. ಅವನನ್ನು ಇನ್ನು ಮನೆಗೆ ಬರಬಿಡಬಾರದೆಂದು ಪತ್ನಿಗೂ ಆಜ್ಞಾಪಿಸಿದರು!

ತಂದೆಯ ಈ ರೀತಿಯ ಮನೋಪರಿವರ್ತನೆಯನ್ನು ಕಂಡು ಜಲಜಾಕ್ಷಿಯು ಕಂಗಾಲಾದಳು. ತನ್ನ ಅಧಿದೇವತೆಯೆಂದು ಭಾವಿಸಿದ ಉಮೇಶ್ಚಂದ್ರನು ಅನಿರೀಕ್ಷಿತವಾಗಿ ತನ್ನಿಂದ ದೂರವಾಗಬೇಕಾಗಿ ಬಂದ ಈ ಪ್ರಸಂಗವನ್ನು ನೋಡಿ ಅವಳು ನಿರಾಶಳಾದಳು. ಪ್ರಾಣಪ್ರಿಯನನ್ನು ಹೇಗಾದರೂ ಮಾಡಿ ಒಲಿಸಿಕೊಳ್ಳಬೇಕೆಂದು ಬಗೆದಳು. ಪುನೆಯ ಸಾರ್ವಜನಿಕ ಉದ್ಯಾನವನದಲ್ಲಿ ಉಮೇಶ್ಚಂದ್ರನನ್ನು ಸಂದರ್ಶಿಸಿದಳು. ಕಥಾ ಪ್ರಾರಂಭದಲ್ಲಿ ನಡೆದ ಸಂಭಾಷಣೆಯು ಇವರೊಳಗೆ ಇಲ್ಲೇ ನಡೆಯಿತು.

ಏನು ಮಾಡಿದರೂ ಉಮೇಶ್ಚಂದ್ರನು ತನ್ನ ಪ್ರತಿಜ್ಞೆಯನ್ನು ತೊರೆಯಲಾರದಾದನು.

× × × × × × × ×

ಒಂದು ದಿನ ಸಂಜೆ ವಿಹಾರಾರ್ಥವಾಗಿ ಮೈದಾನಿಗೆ ಹೋದ ಜಲಜಾಕ್ಷಿಯೂ ಅವಳ ತಮ್ಮ ಆನಂದಭಾಸುವೂ ಕತ್ತಲಾದರೂ ಮನೆಗೆ ಹಿಂತಿರುಗಲಿಲ್ಲ. ತಂದೆತಾಯಿಗಳು ಬಹಳ ಹೊತ್ತಿನ ವರೆಗೆ ಮನೆಯಲ್ಲಿ ಕಾದುಕೂತರು; ಆದರೆ ಅವರು ಬರಲಿಲ್ಲ. ಹುಡುಕಲಾಯಿತು. ರಾವುಬಹದ್ದೂರರ ಕೆಲಸಗಾರರೂ, ಮಿತ್ರರೂ, ಸಂಬಂಧಿಕರೂ, ಸಹಾನುಭೂತಿಪರರೂ ಅವರನ್ನು ಹುಡುಕಿದರು. ಆದರೆ ಜಲಜಾಕ್ಷಿಯೂ ಅವಳ ತಮ್ಮನೂ ಕಾಣಸಿಗಲೇ ಇಲ್ಲ.

ಸುಮಾರು ಇಪ್ಪತ್ತು ದಿವಸಗಳು ಕಳೆದ ನಂತರ ಮುಂಬಾಯಿ ಕ್ರೋನಿಕಲಿನಲ್ಲಿ ಈ ರೀತಿ ವರ್ತಮಾನ ಬಂದಿತು. "ಶ್ರೀ। ಉಮೇಶ್ಚಂದ್ರ ಬಿ. ಎ. ಬಿ. ಎಲ್.ರವರೂ ಕುಮಾರಿ ಜಲಜಾಕ್ಷಿಯವರೂ, ೬ ವರ್ಷ ಪ್ರಾಯದ ಅವರ ತಮ್ಮನೂ ಮುಂಬಾಯಿಯಲ್ಲಿ ಸಾರ್ವತ್ರಿಕವಾಗಿ ಖಾದಿ ಪ್ರಚಾರಮಾಡುತ್ತಿರುವರು. ಇಷ್ಟರಲ್ಲೇ ಸುಮಾರು ೫೦,೦೦೦ ರೂಪಾಯಿಯ ಖಾದಿಯನ್ನು ವಿಕ್ರಯಿಸಿರುವರು."

ಹೀಗೂ ಉಂಟಲ್ಲವೇ?

+ + + +

(ಥಾಮಸ್ ಆಲ್ವ ಎಡಿಸನ್)

ಬಡವ—ಆದರೆ...

ಸುಶ್ರಾವ್ಯ, ಸುಮಧುರ ಗಾನವನ್ನು, ನಮಗೆ ಬೇಸರವಾದಾಗ, ಮನುಷ್ಯವಾಣಿಯ ಹಾಗೂ ವೀಣಾವ್ಮೃದಂಗಾದಿ ಸಾಧನಸಲಕರಣೆಗಳಿಲ್ಲದೆಯೇ ಕೂತಲ್ಲಿ ಕೇಳಿ ಆನಂದಪಡಬಹುದು—ಗ್ರಾಮಫೋನ್ ಯಂತ್ರದ ಸಹಾಯದಿಂದ. ಎಣ್ಣೆಬತ್ತಿಗಳಿಲ್ಲದೆ ಉರಿಯುವ ವಿದ್ಯುದ್ದೀಪದ ಮರಿನಲ್ಲಿ ಬೇಕಾದ ಕೆಲಸಮಾಡಬಹುದು. ಅತ್ಯದ್ಭುತ ನೋಟಗಳನ್ನು, ನಾಟಕಗಳನ್ನು ಮತ್ತು ನಾಟ್ಯವನ್ನು ಚಲನ ಚಿತ್ರಗಳಲ್ಲಿ ಒಂದು ಬಿಳಿಯ ಪರದೆಯ ಮೇಲೆ ನೋಡಿ ಸಂತೋಷಪಡಬಹುದು. ವಿದ್ಯುಚ್ಛಕ್ತಿಯ ಸಹಾಯದಿಂದಲೇ ನಡೆಯುವ ರೈಲುಗಾಡಿಯಲ್ಲಿ ಕುಳಿತು ಘಂಟೆಗೆ ನೂರಾರು ಮೈಲು ಸಂಚರಿಸಬಹುದು. ಆಧುನಿಕ ವಿಜ್ಞಾನಯುಗದಲ್ಲಿ ಅಸಾಧ್ಯವಾದುದು ಯಾವುದು? ಆದರೆ ಮನುಷ್ಯವರ್ಗಕ್ಕೆ ಇಷ್ಟೊಂದು ಸೌಲಭ್ಯ ಸೌಕರ್ಯಗಳನ್ನು ಒಬ್ಬ ಬಡವನು ಒದಗಿಸಿಕೊಟ್ಟರು ವನೆಂದರೆ ಆಶ್ಚರ್ಯದ ಮಾತಲ್ಲವೇ?

ಈ ಮಹಾಪುರುಷನೇ ಥಾಮಸ್ ಆಲ್ವ ಎಡಿಸನ್ ಸಾಹೇಬನು. ಈತನು ಸನ್ ೧೮೪೭ನೇ ವರ್ಷದ ಫೆಬ್ರುವರಿ ತಿಂಗಳಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನದ ಓಹಿಯೋ ಜಿಲ್ಲೆಯಲ್ಲಿರುವ ಮೈಲನ್ ಎಂಬ ಸಣ್ಣ ಹಳ್ಳಿಯಲ್ಲಿ ಒಂದು ಬಡ ಮನೆತನದಲ್ಲಿ ಹುಟ್ಟಿದನು. ಈತನ ತಂದೆಯು ಇವನಂತೆಯೇ (ಎಡಿಸನ್) ಸೂಕ್ಷ್ಮಬುದ್ಧಿಯುಳ್ಳವನು. ಆದರೆ ನಿರ್ದಿಷ್ಟ ಕೆಲಸವನ್ನು ಪೂರ್ಣವಾಗಿ ಮಾಡದೆ, ನಾನಾ ಕಾರ್ಯಗಳಲ್ಲಿ ಒಮ್ಮೆಗೇ ಕೈಹಾಕುತ್ತಿದ್ದುದರಿಂದ ಯಶಸ್ವಿಯಾಗಲಿಲ್ಲ ಮತ್ತು ಹಣವನ್ನೂ ಸಂಪಾದಿಸಲಿಲ್ಲ.

ಎಡಿಸನ್ನನು ಬಾಲ್ಯದಲ್ಲಿ ಮೃದುಸ್ವಭಾವದವನೂ ಯೋಚನಾಪರನೂ ಆಗಿದ್ದನು. ಯಾರಾದರೂ ಏನಾದರೂ ಕೆಲಸ ಮಾಡುತ್ತಿದ್ದರೆ ಆ ಕೆಲಸವನ್ನು ಏಕೆ ಮಾಡುತ್ತಾರೆ, ಹೇಗೆ ಮಾಡುತ್ತಾರೆ ಎಂದು ತಿಳಿಯುವ ವರೆಗೂ ಸುಮ್ಮಗಿರುತ್ತಿದ್ದಿಲ್ಲ. ಹುಡುಗನು ಅಷ್ಟು ಬಲಶಾಲಿಯೂ ಅಲ್ಲ; ಅವನನ್ನು ದೊಡ್ಡ ಹುಡುಗನಾಗುವ ವರೆಗೂ ಶಾಲೆಗೆ ಕಳುಹಿಸಲಿಲ್ಲ. ಕೊನೆಗೆ ಶಾಲೆಯನ್ನು ಸೇರಿದ್ದಾಯಿತು. ಅಲ್ಲಿ ಉಪಾಧ್ಯಾಯನನ್ನು ಎಡೆಬಿಡದೆ ಪ್ರಶ್ನೆ ಮಾಡುತ್ತಿದ್ದುದರಿಂದ ತಾನು ಮೂಢನೆಂದು ಪರಿಗಣಿಸಲ್ಪಟ್ಟನು. ಎರಡು ತಿಂಗಳಾದ ಮೇಲೆ ಶಾಲೆಯನ್ನು ಬಿಡಿಸಿ, ಇವನ ತಾಯಿಯು ಮನೆಯಲ್ಲೇ ಪಾಠ ಹೇಳತೊಡಗಿದಳು. ಆಕೆಯೂ ಮೊದಲು ಉಪಾಧ್ಯಾಯಿನಿಯಾಗಿದ್ದಳು. ಮಾತೆಯ ಪಾಠವೇ ಇವನಿಗೆ ರುಚಿಸತೊಡಗಿತು. ತನ್ನ ೧೦ನೇಯ ವಯಸ್ಸಿನಲ್ಲಿಯೇ ಗಿಬ್ಬನ್, ಹ್ಯೂಮ್ ಎಂಬ ಪ್ರಸಿದ್ಧ ಚರಿತ್ರಾಕಾರರು ಬರೆದ ಚರಿತ್ರೆಗಳನ್ನು ಓದಿಬಿಟ್ಟನು. ಈ ಸಣ್ಣ ವಯಸ್ಸಿನಲ್ಲಿಯೇ ಆತನಿಗೆ ರಸಾಯನ ಶಾಸ್ತ್ರದಲ್ಲಿ ಅಭಿರುಚಿಯುಂಟಾಯಿತು. ಈ ಶಾಸ್ತ್ರದಲ್ಲಿ ಸಣ್ಣ ಪುಟ್ಟ ಪ್ರಯೋಗಗಳನ್ನು ಮಾಡತೊಡಗಿದನು. ಇದನ್ನರಿತ ಮಾತಾಪಿತೃಗಳು ಅವನಿಗೆ ಬೇಕಾದ ಸಲಕರಣೆಗಳನ್ನೂ, ಪುಸ್ತಕಗಳನ್ನೂ ಕೊಂಡುಕೊಟ್ಟರು. ಇವನ್ನೆಲ್ಲಾ ತನ್ನ ಮನೆಯ ಕೋಣೆಯೊಂದರಲ್ಲಿ ಸಂಗ್ರಹಿಸಿ, ಅಲ್ಲಿಯೇ ತನ್ನ ಶಾಸ್ತ್ರಾಭ್ಯಾಸವನ್ನು ಮುಂದುವರಿಸಿದನು.

ಹುಡುಗನಿಗೆ ಹನ್ನೆರಡು ವರ್ಷಗಳಾದುವು. ಆಗಲೇ ಸ್ವತಂತ್ರವಾಗಿ ಜೀವನ ಮಾಡಬೇಕೆಂಬ ಆಶೆಯು ಹುಟ್ಟಿ, ಒಂದು ರೈಲುಗಾಡಿಯಲ್ಲಿ ವರ್ತಮಾನ ಪತ್ರವನ್ನು ಮಾರಲು ನೇಮಿಸಲ್ಪಟ್ಟನು. ವರ್ತಮಾನ ಪತ್ರಗಳನ್ನೂ, ಮಾಸಪತ್ರಗಳನ್ನೂ ಇಟ್ಟುಕೊಳ್ಳಲು ಗಾಡಿಯಲ್ಲೇ ಒಂದು ಮೂಲೆಯನ್ನು ಕೊಟ್ಟಿದ್ದರು. ಅಲ್ಲಿಯೂ ತನ್ನ ಶಾಸ್ತ್ರಾಭ್ಯಾಸವನ್ನೂ, ಪ್ರಯೋಗಗಳನ್ನೂ ಮಾಡುತ್ತಬಂದನು. ಇಷ್ಟರಿಂದಲೇ ತೃಪ್ತಿಯಾಗಲಿಲ್ಲ. ಒಂದು ಮುದ್ರಾಯಂತ್ರವನ್ನು ಕೊಂಡು ರೈಲಿನಲ್ಲೇ ಒಂದು ವಾರ ಪತ್ರಿಕೆಯನ್ನು ಮುದ್ರಿಸಿ ಪ್ರಕಟಿಸಲುಪಕ್ರಮಿಸಿದನು. ಈ ಪತ್ರಿಕೆಯಲ್ಲಿ ಸ್ಥಳೀಯ ಸುದ್ದಿಗಳು, ರೈಲಿನಲ್ಲಿ ನಡೆದ ಸಮಾಚಾರಗಳು ಮತ್ತು ಸಂತೆಯ ಧಾರಣೆವಾಸಿಗಳು ಇವೆಲ್ಲಾ ತುಂಬಿರುತ್ತಿದ್ದುವು. ಆ ಸಣ್ಣ ವಯಸ್ಸಿನಲ್ಲಿ ಎಷ್ಟು ಉತ್ಸಾಹ, ಎಷ್ಟು ಕರ್ತೃತ್ವಶಕ್ತಿ!

ಎರಡು ಮೂರು ವರ್ಷಗಳಾದುವು. ಎಡಿಸನ್ನನಿಗೆ ಹದಿನಾರು ವರ್ಷಗಳ ಸಮಯ. ರೈಲಿನಲ್ಲಿ ಒಂದು ದಿನ ತನ್ನ ರಸಾಯನ ಶಾಸ್ತ್ರಪ್ರಯೋಗವನ್ನು ನಡೆಸುತ್ತಿರುವಾಗ ಆತನ ರಂಜಕದ (ಫಾಸ್ಫೊರಸ್) ಸೀಸೆಯೊಂದು ನೆಲಕ್ಕುರುಳಿ ಒಡೆದು ಆ ಸಾಮಾನುಗಳು ತುಂಬಿದ್ದ ಗಾಡಿಗೆ ಬೆಂಕಿಯು ಹತ್ತಿಕೊಂಡಿತು. ಗಾಡಿಯ ಕಂಡಕ್ಟರನು ಹಿಂದುಮುಂದು ನೋಡದೆ ಹುಡುಗನನ್ನು ಗಾಡಿಯ ಹೊರದೂಡಿ, ಆತನ ಕಿವಿಗಳಿಗೆ ಬಲವಾದ ಪೆಟ್ಟುಗಳನ್ನು ಕೊಟ್ಟನು. ಇದರ ಪರಿಣಾಮವಾಗಿ ಆತನ ಶ್ರವಣಶಕ್ತಿಯು ಕ್ರಮೇಣ ಕಡಿಮೆಯಾಗಿ, ಕೆಲವು ದಿನಗಳ ನಂತರ ಪೂರ್ತಿಯಾಗಿ ಕಿವುಡನಾದನು. ರೈಲಿನಲ್ಲಿದ್ದ ಕೆಲಸವೂ ಹೋಯಿತು.

ಹೀಗಿರಲು ಒಂದಾನೊಂದು ದಿನ ರೈಲಿಗೆ ಸಿಕ್ಕಿ ಪ್ರಾಣಬಿಡುತ್ತಿದ್ದ ಒಬ್ಬ ಸ್ಟೇಶನ್ ಮಾಸ್ತರನ ಮಗುವನ್ನು ಇವನು ರಕ್ಷಿಸಿದುದರಿಂದ, ತನ್ನ ಕೃತಜ್ಞತೆಯನ್ನು ಸೂಚಿಸಲು ಆ ಮಗುವಿನ ತಂದೆಯು ಇವನಿಗೆ ತಂತಿಕೊಡುವ ವಿದ್ಯೆಯನ್ನು (ಟೆಲಿಗ್ರಫಿ) ಕಲಿಸಿದನು. ಇದರಿಂದ ಎಡಿಸನ್ನನು ನಾಲ್ಕಾರು ವರ್ಷ ತನ್ನ ಜೀವನ ನಡೆಸಿದನು.

ತನ್ನ ೨೨ನೇಯ ವಯಸ್ಸಿನಲ್ಲಿ, ಕೈಯಲ್ಲಿ ಒಂದು ಕಾಸೂ ಸಹ ಇಲ್ಲದೆ ನ್ಯೂಯೋರ್ಕ್ ಪಟ್ಟಣವನ್ನು ತಲಪಿದನು. ಅಲ್ಲಿ ಒಂದು ಟೆಲಿಗ್ರಾಫ್ ಕಂಪೆನಿಗೆ ಕೆಲಸಕ್ಕೆ ಅರ್ಜಿಹಾಕಿ, ಉತ್ತರ ನಿರೀಕ್ಷಣೆಯಲ್ಲಿರುವಾಗಲೇ ಆ ಕಂಪೆನಿಯ ಯಂತ್ರವಾವುದೋ ಕೆಟ್ಟುಹೋಗಿ, ಅವರ ಕೆಲಸವೆಲ್ಲಾ ಏಕಾಏಕಿ ನಿಂತುಹೋಯಿತು. ಯಾರಿಗೂ ದಿಕ್ಕೇ ತೋರಲಿಲ್ಲ. ಆಗ ಎಡಿಸನ್ನನು ತಾನಾಗಿ ಹೋಗಿ, ಆ ಯಂತ್ರವನ್ನು ಸರಿಮಾಡಿ, ಎರಡು ಘಂಟೆಗಳ ಸಮಯದಲ್ಲಿ, ಕೆಲಸವೆಲ್ಲಾ ಮೊದಲಿನಂತೆ ಸುಸೂತ್ರವಾಗಿ ನಡೆಯುವಂತೆ ಮಾಡಿಕೊಟ್ಟನು. ಕೂಡಲೇ ತಿಂಗಳಿಗೆ ೩೦೦ ಡಾಲರುಗಳಂತೆ ಸಂಬಳ ಕೊಟ್ಟು ಆತನನ್ನು ಅಲ್ಲಿಯೇ ಕೆಲಸಕ್ಕೆ ನೇಮಿಸಿಕೊಂಡರು.

ಈ ಹುದ್ದೆಯು ತನ್ನ ನೂತನ ನಿರ್ಮಾಣಗಳಿಗೆ ಸಾಕಷ್ಟೇ ಹಣವನ್ನೂ, ವಿರಾಮವನ್ನೂ ಒದಗಿಸಿಕೊಟ್ಟಿತು. ಒಂದು ವರ್ಷ ಕಾಲದಲ್ಲಿಯೇ ತಾನು ಹೊಸದಾಗಿ ಕಂಡುಹಿಡಿದಿದ್ದ ತಂತಿಯ ಯಂತ್ರವನ್ನು ಮಾರಿ ಹೇರಳವಾಗಿ ಹಣ ಸಂಪಾದಿಸಿದನು. ಈ ಹಣದಿಂದ ತಾನೇ ಸ್ವತಂತ್ರವಾಗಿ ಕಾರ್ಖಾನೆಯೊಂದನ್ನು ಸ್ಥಾಪಿಸಿ ಅದರಲ್ಲಿ ಅನೇಕ ತಂತಿಯ ಸಲಕರಣೆಗಳನ್ನು ತಯಾರಿಸತೊಡಗಿದನು.

ಅಂದಿನಿಂದ ನೂತನ ಯಂತ್ರನಿರ್ಮಾಣವೇ ಆತನ ಮುಖ್ಯ ಕೆಲಸವಾಗುಳಿಯಿತು. ತನ್ನ ತನುಮನಧನಗಳನ್ನೆಲ್ಲಾ ಇದಕ್ಕೆ ಉಪಯೋಗಿಸತೊಡಗಿದನು. ಗ್ರಾಮಫೋನ್ ಪೆಟ್ಟಿಗೆಯನ್ನು ಆತನೆ ಮೊದಲು ಕಂಡುಹಿಡಿದವನು. ವಿದ್ಯುಚ್ಛಕ್ತಿಯನ್ನೇನೋ ಈತನಿಗೆ ಮೊದಲೇ ಕಂಡುಹಿಡಿದಿದ್ದರು. ಆದರೆ ಈ ಶಕ್ತಿಯು ತಂತಿಯ ಮೂಲಕ ಬೇಕಾದೆಡೆಗೆ ಸಂಚರಿಸಿ ಮನೆಯ ದೀಪಕ್ಕೂ, ಕಾರ್ಖಾನೆಯ ಯಂತ್ರಗಳು ತಿರುಗುವುದಕ್ಕೂ, ರೈಲ್ವೇ ಗಾಡಿಗಳು ನಡೆಯುವುದಕ್ಕೂ ಉಪಯೋಗವಾಗುವಂತೆ ಮಾಡಿದವನು ಎಡಿಸನ್ನನೇ. ಚಲನ ಚಿತ್ರಗಳನ್ನು ಹೇಗೆ ತಯಾರಿಸಬೇಕೆಂಬುದನ್ನು ಕಂಡುಹಿಡಿದವನೂ ಈತನೇ. ಇತ್ತೀಚೆಗೆ ಪ್ರಚಲಿತವಾಗಿರುವ ಮಾತನಾಡುವ ಸಿನೆಮದ ಕಾರಣಕರ್ತೃವೂ ಇವನೇ. ವಿದ್ಯುಚ್ಛಕ್ತಿಯ ಮೂಲಕ ಅನೇಕ ನೂತನ ಯಂತ್ರನಿರ್ಮಾಣಗಳನ್ನು ಮಾಡಿ ಈ ಅದ್ಭುತಶಕ್ತಿಯು ಮನುಷ್ಯನಿಗೆ ಎಷ್ಟು ಉಪ

ಸ್ವಾನುಭವದಿಂದ ಬುದ್ಧಿವಂತನಾಗು.

ಯೋಗಕಾರಿಯೆಂದು ತೋರಿಸಿ, ಮಾನವಕೋಟಿಯು ತನಗೆ ಚಿರಋಣಿಯಾಗುವಂತೆ ಮಾಡಿದ್ದಾನೆ.

ಬಾಲ್ಯದಿಂದಲೂ ಈತನು ತೋರಿದ ಉದ್ಯೋಗತತ್ಪರತೆ, ಕಷ್ಟಸಹಿಷ್ಣುತೆ, ಧೈರ್ಯ, ಸಾಹಸ ಮುಂತಾದ ಗುಣಗಳು ಆದರ್ಶಪ್ರಾಯವೂ ಅನುಕರಣೀಯವೂ ಆದುವು. ಈತನು ನಿರ್ಮಾಣ ಮಾಡಿರುವ ಯಂತ್ರಸಮೂಹವನ್ನೂ ತನ್ಮೂಲಕ ಪ್ರಪಂಚಕ್ಕೆ ಈತನು ಒದಗಿಸಿಕೊಟ್ಟಿರುವ ಅನುಕೂಲತೆಗಳನ್ನೂ ನೋಡಿ ಯಾರು ತಾನೇ ವಿಸ್ಮಯಮೂಕರಾಗರು?

ಇಷ್ಟಾಗಿ ಆತನು ಶಾಸ್ತ್ರವೇತ್ತನಲ್ಲ; ಶಾಲೆ ಕಾಲೇಜುಗಳಲ್ಲಿ ಓದಿದವನೂ ಅಲ್ಲ; ತನ್ನ ಸೂಕ್ಷ್ಮ ಬುದ್ಧಿಯಿಂದ, ಸ್ವಂತ ಪ್ರಯೋಗಗಳನ್ನು ಮಾಡಿ, ದೊಡ್ಡ ದೊಡ್ಡ ವಿಜ್ಞಾನಶಾಸ್ತ್ರ ಪಾರಂಗತರೂ ಸಹ ತನ್ನ ಕೆಲಸವನ್ನು ನೋಡಿ ತಲೆದೂಗುವಂತೆ ಮಾಡಿದ್ದಾನೆ. ಆತನು ಶ್ರೀಮಂತನು ಅಲ್ಲ; ಬಡತನದಲ್ಲಿ ಹುಟ್ಟಿ ಬೆಳೆದವನು. ಆದರೆ ತನ್ನ ನೂತನ ನಿರ್ಮಾಣಗಳಿಂದ ಲಕ್ಷಾಂತರ ಹಣವನ್ನು ಸಂಪಾದಿಸಿದನು. ಈ ಹಣವನ್ನೆಲ್ಲಾ ಹೊಸ ಹೊಸ ಪ್ರಯೋಗಗಳಿಗೆ ಉಪಯೋಗಿಸುತ್ತಿದ್ದನು. ಅಷ್ಟೇ ಅಲ್ಲದೆ ತನ್ನ ಸ್ವಂತ ಹಣದಿಂದ ಸಾವಿರಾರು ಜನರಿಗೆ ಉಪಯೋಗವಾಗುವಂತೆ, ಸಂಯುಕ್ತ ಸಂಸ್ಥಾನದಲ್ಲಿ ಒಂದು ದೊಡ್ಡ ಶಾಲೆಯನ್ನು ಸ್ಥಾಪಿಸಿರುವನು. ಈ ಶಾಲೆಯಲ್ಲಿ ಓದಲು ಸಾವಿರಾರು ಹುಡುಗರು ಯಾವಾಗಲೂ ಹಾತೊರೆಯುತ್ತಿರುತ್ತಾರೆ. ತನ್ನ ೬೪ನೆಯ ವಯಸ್ಸಿನಲ್ಲಿ ದಿನ ೧ಕ್ಕೆ ೧೯ ಘಂಟೆಗಳ ಕಾಲ ಕೆಲಸ ಮಾಡುತ್ತಿದ್ದನು. ಅಲ್ಲದೆ ಒಂದೇ ಸವನೆ ೪—೫ ದಿನಗಳಲ್ಲಿ ತನ್ನ ಪ್ರಯೋಗಶಾಲೆಯಲ್ಲಿ ಹೊಸ ಯಂತ್ರಗಳ ನಿರ್ಮಾಣವನ್ನು ಯೋಚಿಸುತ್ತ ನಿಂತುಬಿಡುತ್ತಿದ್ದನು.

ಒಂದು ಜೀವಮಾನದಲ್ಲಿ ಇಂತಹ ಅತ್ಯದ್ಭುತ ನಿರ್ಮಾಣಗಳನ್ನು ಮಾಡಿ, ಇಡೀ ಪ್ರಪಂಚಕ್ಕೆ ಉಪಯುಕ್ತವೂ ಆನಂದದಾಯಕವೂ ಆದ ಸಾಧನಗಳನ್ನು ಕಲ್ಪಿಸಿ ಕೊಟ್ಟ ಮಹಾನುಭಾವನನ್ನು ಮನುಷ್ಯನೆಂದು ಕರೆಯುವುದಕ್ಕಿಂತಲೂ ಮಾನವಾತೀತನೆನ್ನುವುದು ಹೆಚ್ಚು ಸಮಂಜಸವಲ್ಲವೇ?

ಇವನು ೧೯೩೧ನೇ ಇಸವಿ ಒಕ್ಟೋಬರ ತಾ. ೧೮ನೇ ದಿನ ನ್ಯೂಯೋರ್ಕಿನಲ್ಲಿ ಕಾಲವಾದನು. ಸ್ಥೂಲದೇಹವನ್ನೇನೋ ಆತನು ತ್ಯಜಿಸಿದ್ದಾನೆ. ಆದರೆ ಆತನ ಕೀರ್ತಿಯು ಮಾತ್ರ ಆ ಮಹಾತ್ಮನ ನಿರ್ಮಾಣಗಳಿಂದ ಜನರು ಉಪಯೋಗ ಹೊಂದುವ ವರೆಗೂ ಶಾಶ್ವತವಾಗಿ ಬೆಳಗುವುದರಲ್ಲಿ ಸಂದೇಹವಿಲ್ಲ. ಪರಮೇಶ್ವರನು ಆತನ ಆತ್ಮಕ್ಕೆ ಶಾಂತಿಯನ್ನೀಯಲಿ! ("ವಿ. ಕ.")

ಸಾದರ ಸ್ವೀಕಾರ.

(1) The All India Trade Magazine, (2) ಸತ್ಯಪರೀಕ್ಷೆ, (3) ಜ್ಯೋತಿಷ್ಯಸಾಗರ ಮಾಸಪತ್ರಿಕೆಯ ಎಂಟು ಸಂಚಿಕೆಗಳು, (4) ಹಿಂದೂಮುಸಲ್ಮಾನ್. ಮೂಲ್ಕಿಯ ಶ್ರೀ ರಾಧಾಕಾಂತ ಮುದ್ರಣಾಲಯದಿಂದ ಪ್ರಕಾಶಿತವಾದ Merchants Diery (ವರ್ತಕ ಡೈರಿ ೧೯೩೨—೩೩) ಒಂದು ಹಸ್ತಗತವಾಗಿದೆ. ಆಂಗೀರಸ ಸಂ।ರದ ಕಾರ್ತಿಕ ಶುದ್ಧ ೧ರಿಂದ ಶ್ರೀಮುಖ ಸಂ।ರದ ಆಶ್ವೀಜ ಬಹುಳ ೩೦ರ ವರೆಗಿನ ಕೆಲೆಂಡರು ಇರುವ ೩೬೦ ಪುಟಗಳ ಡೆಮ್ಮಿ $\frac{1}{4}$ ಸ್ಯಾಜಿನ ಉತ್ತಮ ಕಾಗದ ಡೈರಿ ಇದು. ದಪ್ಪ ಬ್ಯಾಂಡು. ಕ್ರಯ ಒಂದು ರೂಪಾಯಿ. ಇದು ವ್ಯಾಪಾರಸ್ಥರಿಗೆ ಪ್ರಾಮುಖ್ಯ ಬೇಕಾಗಿರುವ ಲೆಖ್ಖ ಪುಸ್ತಕ. ವ್ಯಾಪಾರದ ಅವಸರದಲ್ಲಿ ಇಂತಹ ಪುಸ್ತಕಗಳು ಅತ್ಯುಪಯುಕ್ತವಾಗಿವೆ. ೧ ರೂಪಾಯಿಯಿಂದ ೩೦ ರೂಪಾಯಿಗಳ ವರೆಗೆ ಸಂಬಳವಿರುವವರಿಗೆ ಪ್ರತಿ ದಿನಕ್ಕೆಷ್ಟು ಬೀಳುತ್ತದೆಂಬುದನ್ನು ತೋರಿಸುವ ಪಟ್ಟಿ, ಪುಸ್ತಕದ ಕೊನೆಯಲ್ಲಿ ಆರು ಪುಟಗಳ ಜ್ಞಾಪಕ ಪತ್ರ ಇದರಲ್ಲಿವೆ. ಕಳೆದ ಸಲವೂ ಈ ಮುದ್ರಾಲಯದವರು ಇಂತಹ ವರ್ತಕ ಡೈರಿಯನ್ನು ಪ್ರಕಟಿಸಿದ್ದರು. ಹೆಚ್ಚಿನ ಪ್ರೋತ್ಸಾಹವು ಸಿಕ್ಕಿದೆ. ಈ ಸಲವೂ ದಕ್ಷಿಣ ಕನ್ನಡದ ಸಮಸ್ತ ವರ್ತಕವರ್ಗದವರಿಂದ ಪ್ರೋತ್ಸಾಹಿಸಲ್ಪಡದಿರಕ್ಕಿಲ್ಲವೆಂಬ ಭರವಸೆ ನಮಗಿದೆ.

ಕಳೆದ ತಿಂಗಳಲ್ಲಿ ವಿಮರ್ಶಿಸಲಾಗದ ಪುಸ್ತಕಗಳನ್ನು ಈ ಸಲ ಬಂದಿರುವ ಪುಸ್ತಕಗಳೊಡನೆ ಬರುವ ಸಂಚಿಕೆಯಲ್ಲಿ ವಿವರವಾಗಿ ವಿಮರ್ಶಿಸುವೆವು. (ಸಂಪಾದಕ.)

ECHO OF UNTOUCHABILITY.

By H. K. A. Kunderan, Bombay.

When the future historian of India sits down to write the history of this land, he can hardly omit to describe the immense significance that attaches to the great moral fight which was instituted by our National Leader, against the injustice shown to the large majority of the so-called Depressed Classes among the huge Hindu Community in India. The Philosophic Preacher of India, the Saintly Sage of Sabarmati—that fragile little man on whose little shoulders the destiny of the 350 million people of India rests to-day, resolved to "fast unto eternal death," rather as a protest against the British Imperialism in declaring separate electorates for the so-called depressed classes in their so-called Communal Award.

Keeping himself inside the stone-walls and iron bars, Gandhiji fought the battle with the force of his spiritual weapon which he so wonderfully whirled against the fabulous foe that within a week, with the result that the Mahatma was in the arms of success when the outside world is still standing aghast at this modern miracle.

We have to thank God, who in His abundant mercy, saved this saintly son from the ravages of self-immolation. Gandhiji is spared—spared so that he might work many more miracles in more difficult times to come; but miracles or otherwise, we are not here alone rest contended. The baneful mentality of the Sanatanist stalwarts among the Hindu Community must be burried. Hypocrites, social and political imposters are the very bane of society who hamper India's social and political emancipation. These people must be booked and got rid of from the society. Modern India understands that the so-called depressed classes are not a different community. Untouchability never was a religious institution of the Hindus. It is an excrescence of a growth in the history of Hindu religion. Look at the countries of the World. Untouchability is a problem almost unknown amongst the people of the same race to the extent that we have it in India. Religion (God knows which kind of religion it is!) seems to keep these millions of our breathren from even worshipping the same God who created these who arrogate to themselves religious, nay, even racical superiority. Untouchability is, therefore, definitely the creation of those few in India who with the view to maintain their social, economical and political ascendency over the others, accentuate these differences between man and man. Can there be in the Kingdom of God such distinctions between human beings?

When the entire intelligent class of the country is making strenuous efforts to efface this canker of untouchability which is eating through the vitals of India's life, it is really atrocious to find a few orthodoxical Hindu Bigots—who are by no means uneducated—attempting to give further lease to this canker and thus put the hands of the clock of the social and political progress of the country in a retrograde direction. In a frenzied fit of irrational idolatory, these sanatanists are obiviously out to perpetrate the evils of untouchability. Dear readers, let us refer to some of the Hindu Scriptures and see whether the course adopted by these sanatanists is justified.

Prajapati or Brahman, the creator of this Universe, when he brought the world into existance, he is said to have divided the people into four classes. In so sub-dividing the people he compares these four classes to four different parts of human body with duties similar to these parts. The Brahmins are compared with the head, the Kshatrias with the hands, the Vaishyas with the stomach and Sudras with the feet. Now the question which arises here is whether the different parts of human body are to be treated as essential and inseparable parts of one organic whole or not? Can this one organic whole function in the

absence of any of its parts? Is not, therefore the blending of the different parts an essential factor for the harmonious working of life. Then to treat a certain class of people as untouchables who cannot even enter the sacred precincts of the other, is really tantamount to cutting off of that class from others and creating an impervious wall between class and class. Prajapati never intended that such watertight compartments were to be created between different classes.

Parable of Shankaracharya and Chandala.

The parable of Shri Shankaracharya and the Chandala relates how a Chandala crossed the path of Shri Shankaracharya on a certain occasion at Benares. Shri Shankaracharya the Universal teacher of pure monisim (Advaitha Vedanta) at first peremptorily commanded the Chandala to be away from his path; but the learned pariah started questioning as to whether there was any difference between one human soul and the other. The controversy lasted a while and ultimately Shri Shakaracharya saw in the Chandala the very embodiment of God Shaker and heartily shook hands with him.

Rama and Shabri.

Did not Rama, the incarnation of Lord Vishnu enjoy the half-eaten fruit of Shabri an untouchable woman?

Narsinh Mehta.

A third illustration, a more modern one is available from the life of the Gujarathi Poet, Narsinh Mehta. He belonged to a highly aristrocratic class of Brahmins called Nagars; but we all know how he mixed with Dheds and Bhangis and spent his time in reciting devotional songs of Lord Krishna.

Buddha.

Did not Buddha preach to the world the oneness of humanity and the supreme doctrine of love to all living beings. Later on appeared in this land, teachers like Chaitanya, Dayanand and Shri Ram Mohan Roy and others who all laid no little importance to this divine cause of establishing peace in the World.

Let me quote from Bhagavat Gita wherein Lord Krishna definitely said that the four divisions are based essentially on "Guna" and "Karma" and not on birth.

It is the purity of the heart and the excellence of the head that counts much, but not birth. Birth is purely accidental repeats the Modern Mahatma.

Let the ardent sanatanists who wax eloquent on the tenets of Hinduism devote their thoughts on these illustrations before arriving at some final decision.

Untouchables one-third of the Population.

The total strength of Hindus in India at present is about *22* crores out of which so many are contemptuously styled by these stalwarts as untouchables. It is highly inconcievable that such a vast mass of the people should any more be treated as "untouchables." A narrow minded attitude like this towards this class of people is fraught with great danger of the entire mass of these people being wiped off some days from Hinduism. These untouchables are human beings as much as these sanatanists are. They are not wicked men. They are not ugly beasts. They have no horns, no tails, none of the fee-faw-fum of Tosso and Klopstock. Still it seems inconcievable that these sanatanists are occasionally agog with the cries of "Down with Imperialism" and who pose as the accredited martyrs of freedom, should decidedly act as Apostles of Tyrrany with their kinsmen by keeping them at arms length.

Youth will Fight the canker

The youth–the aggressive youth of the land alone can fight this canker of untouchability. To them are given the glorious chances under the guidance of "Mahatma" to become the members of Anti-Untouchability Committees all over India and make the spade work so as to pave the way for that Superman to reach the Goal of India's salvation.

These are the days in the political history of India when the country is held in the titanic grip of communal warfare. It is time for the educated men to sink these differences and evolve true Swaraj; but instead of that we are faced with such troubles not only between Hindus and Muslims but even among Hindus and Hindus in the shape of Brahmins versus non-brahmins and touchable controversy. The only true religion of helots like Indians is the "Religion of Independents."

(The Editor will be glad to consider and publish from time to time short and sweet articles written in English on subjects of interest. On no occasion they shall exceed two pages of "Badavara Bandhu.")

ಹೇನುರಾಯನು ತಗಣೆರಾಯನಿಗೆ ಬರೆದ ಪತ್ರ.

ಲೇಖಕ:—ಶ್ರೀ. ಬಿ. ರಾಮಪ್ಪ, ಬಿ. ಎ. ಮಂಗಳೂರು.

ಎಲ್ಲಿ?
೨೫-೧೦-೧೯೩೨.

ಕ್ಷೇಮ, ತರುವಾಯ ತಮ್ಮ ಕಳಿದ ಸಲದ ಪತ್ರವು ಬಂದು ತಲಪಿ ಸಂತೋಷವಾಯಿತು. ತಮ್ಮ ಕಷ್ಟದ ಕುರಿತು ನನಗೆ ತಿಳಿಯಿತು. ನನ್ನ ಸಂಗತಿ ಬರೆಯಬೇಕೇ?

ಪ್ರಿಯನೇ, ನನ್ನ ಭಾಗ್ಯವನ್ನೆಂತು ವರ್ಣಿಸಲಿ? ರಾಜಕುಮಾರರಿಗೆ ಕೂಡ ಇಂತಹ ಸುಖವನ್ನನುಭವಿಸುವ ಅದೃಷ್ಟವಿರಲಾರದು! ಅದರಲ್ಲಿಯೂ ಈಗಿನ ರಿಟ್ರೆಂಚ್‌ಮೆಂಟಿನ ಪ್ರಭಾವದಿಂದ ನನ್ನನ್ನೆದುರಾಳಿಸುವ ಶಕ್ತಿಯವರಿಲ್ಲ! ರಾಮರಾಜ್ಯದಂತಹ ಈ ಭೂಮಿಯಲ್ಲಿ ನನ್ನಷ್ಟು ಸುಖವನ್ನು ಯಾರೂ ಅನುಭವಿಸಿರಲಾರರು — ಇರಲಾರರೆಂದರೆ ನಿಜವಾಗಿಯೂ ಇರಲಾರರು! ಏನು? ಸಟೆಯೆಂದು ಭಾವಿಸಿದಿಯಾ? ಅಲ್ಲ—ಸಟೆಯಲ್ಲ ದಿಟ!!

ಗಮಗಮಿಸುವ ಕಾಮಿನಿಯಾ ಆಯಿಲ್, ಬ್ರಿಲ್ಯೆಂಟೈನ್, ಪೊಂಪೆ ಮುಂತಾದ ಸುಗಂಧ ದ್ರವ್ಯಗಳಲ್ಲಿಯೇ ನನ್ನ ಉಸಿರಾಟ. ತಲೆಗೂದಲನ್ನು ರೋಯಲ್ ಸೆಲೂನಿನಲ್ಲಿ ಪ್ರತಿವಾರವೂ ಕತ್ತರಿಸಿ, ಕುಟಿಕ್ಯೂರ ಪೌಡರ್ ಹಾಕಿ ಪುನಃ ಪನ್ನೀರಸ್ನಾನ, ಯಾರ್ಡ್ಲಿಗಳ ಪೂಷಣೆ, ಇವು ಸುರಲೋಕದ ಅಪ್ಸರಸ್ತ್ರೀಯರಿಗೂ ಕೂಡ ಸಿಗುವುದಲ್ಲ. ಇದಕ್ಕಲ್ಲವೇ ಭಾಗ್ಯವೆನ್ನಬೇಕು!

ನನ್ನ ದುರ್ದಿನಗಳು ಸಂದುವು. ಆಂಗ್ಲೇಯರು ಇಲ್ಲಿ ಕಾಲಿಟ್ಟ ದಿನವೇ ನನ್ನ ಶನಿದೇವನು ಪಲಾಯನ ಗೈದನು. ಬಾಲಕಬಾಲಿಕೆಯರು ಶಾಲೆಗೆ ಹೋಗಿ ಇಂಗ್ಲಿಷ್ ಕಲಿಯಲಿಕ್ಕಾರಂಭಿಸಿದುದೇ ತಡ, 'ಹಿಂದು' 'ಇಲ್ಲಸ್ಟ್ರೇಟೆಡ್ ವೀಕ್ಲಿ' 'ಟೈಮ್ಸ್ ಆಫ್ ಇಂಡಿಯಾ' 'ಬಡವರ ಬಂಧು' ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗುವ ಜಗತ್ ಬಂಧುಗಳಾದ ಸುಗಂಧದ್ರವ್ಯಗಳೂ ಪೌಡರ್‌ಗಳೂ ಅವರ ದೃಷ್ಟಿಗೆ ಬಿದ್ದೇಬಿಟ್ಟವು. ಕೂಡಲೇ ತರಿಸಿದರು—ನನಗೆ ಮನ್ನಣೆಮಾಡಿದರು. ಸನ್ಮಾನ ಮಾಡಿದರು. ವೇಸಲೀನ್, ಸೆಂಟ್, ಹೇರ್‌ಆಯಿಲ್, ಇವುಗಳನ್ನು ಜೀವವಿಲ್ಲದ ಕೇಶರಾಶಿಗೆ ಬರೇ ನೆವಮಾತ್ರಕ್ಕೆ ಹಾಕುತ್ತಾರೆ. ಅವುಗಳ ಸರಿಯಾದ ಪಾರುಪತ್ಯವನ್ನು ಜೀವಂತನಾದ ನಾನೇ ಮಾಡುತ್ತಿದ್ದೇನೆ.

ಭಗವಂತಾ! ನಾನೇನೂ ಈ ಸುಖವನ್ನಾಶಿಸಿದುದಿಲ್ಲ. ತಾನಾಗಿಯೇ ಈ ಸುಖದೇವತೆಯು ನನ್ನನ್ನು ಪ್ರೀತಿಸುತ್ತಿರುವುದು. ಬೇಡವೆಂದರೂ ಕೇಳದು. ಎಣ್ಣೆಯೂ ಮಣ್ಣೂ ಒಟ್ಟುಸೇರಿ, ಬೆವರಿನಿಂದ ಕೊಳೆ ಹಿಡಿದ ಕೇಶರಾಶಿಯಲ್ಲಿ ಮೂಗು ಹಿಡಿದು, ನನಗೆ ಉಸುರುಕಟ್ಟುವ ಸಂದರ್ಭವೊದಗಿದರೂ ಈ ಸುಖದೇವತೆಯನ್ನು ನನಗೆ ಬಿಡಲಸಾಧ್ಯವಾಗುತ್ತಿರುವುದು.

ಮಾನವನಿಗೆ ನಾನೇನೂ ಉಪಕಾರವಾಗುವಂತಿಲ್ಲ. ಬದಲಾಗಿ ಅವರ ನೆತ್ತರನ್ನೇ ಕುಡಿದು ಜೀವಿಸುವೆನು. ನನಗಾತನು ಎಷ್ಟು ಸನ್ಮಾನ ಮಾಡಿದರೂ ಹಾವಿಗೆ ಹಾಲೆರದಂತೆಯೇ ಸರಿ. ಅಬ್ಬಬ್ಬ ! ಮಾನವನ ದುರ್ನಡತೆಯನ್ನೂ ಅಹಂಕಾರ ಗರ್ವವನ್ನೂ ಎಣಿಸಿದಾಗಲೆಲ್ಲ ನನಗೆ ರೋಮಾಂಚನವಾಗುವುದು. ಹಿಂದಿನಿಂದ ಆನೆಯಷ್ಟು ಹೋದರೂ ಕೂಡ ಆತನಿಗೆ ದುಃಖವೇ ಇಲ್ಲ. ಆದರೆ, ಇದಿರಿನಲ್ಲಿ ನುಸಿಯಷ್ಟೂ ಹೋಗಕೂಡದು. ಆತನು ಹಾಕುವ ಸುಗಂಧದ್ರವ್ಯವು ಆ ನಿರ್ಜೀವವಾದ ಕೇಶರಾಶಿಗೆ! ಆದರೆ ಸಂಪೂರ್ಣ ಫಲಭೋಕ್ತಾರನು ನಾನೇ. ಅಜ್ಞಾನಸಾಗರದಲ್ಲಿ ಮುಳುಗಿದ ಆ ನರಜೀವಿಗೆ ಇದರ ಗೋಚರವೇ ಇಲ್ಲ. ನನಗೆ ಸುಗಂಧದ್ರವ್ಯವನ್ನು ಪೂಸಿ, ಪನ್ನೀರು ಸ್ನಾನಮಾಡಿಸೆಂದರೆ ಕೋಪದಿಂದಲೂ, ಗರ್ವದಿಂದಲೂ ಕಿಡಿಕಿಡಿಯಾಗುವನು. ಹೇಳದೆ, ಕೇಳದೆ ಕಣ್ಮುಚ್ಚಿ ನನ್ನನ್ನೀರೀತಿ ಪ್ರೀತಿಸಿ ನನ್ನಾರೈಕೆ ನೋಡುವ ಆ ಮನುಜನ ಅಜ್ಞಾನಾಂಧತೆ ಇನ್ನೆಷ್ಟಿರುವುದೋ ಕಾಣೆ! ಸೃಷ್ಟಿಯಲ್ಲಿ ಸರ್ವಶ್ರೇಷ್ಠನಂತೆ!! ತನ್ನನ್ನು ತಾನೇ ಹೊಗಳಿಕೊಳ್ಳುವುದಲ್ಲವೇ!!! ನಾನೂ ಕೂಡ, ನನ್ನ ಜನ್ಮವೇ ಅತ್ಯುತ್ಕೃಷ್ಟವೆನ್ನುವೆನು. ಅವನ ದಂಡು ಬರುವಾಗಲ್ಲವೇ?—ನೋಡಿಕೊಳ್ಳಬಹುದು. ಸದ್ಯಕ್ಕೆ ನಾನೇ ಸುಖಿ—ಪುಣ್ಯಾತ್ಮನು—ದುಡಿಯದೇನೆ ಸುಖವಾಗಿಯೇ ಜೀವಿಸುವೆನು. ಹಾ! ನನ್ನ ಭಾಗ್ಯವೇ!

ಸರ್ವ ಸೃಷ್ಟೀಶ್ವರನಾದರೂ ಶಂಕರನು ಗಂಗೆಯನ್ನು ಸದಾ ಕೇಶದಲ್ಲಿಯೂ, ಚಂದ್ರನನ್ನು ಹಣೆಯಲ್ಲಿಯೂ ಹೊರಬೇಕಾಗುವುದು. ಸರ್ಪದ ಹಾರವನ್ನೇ ಧರಿಸಬೇಕಾಗುವುದು. ವಿಷರಾಶಿಯನ್ನು ಸದಾ ಕಂಠದಲ್ಲಿಯೇ ಇರಿಸಬೇಕಾಗುವುದು. ಆದಿಮಧ್ಯಾಂತರಹಿತನಾದರೂ ಮಹಾವಿಷ್ಣುವು ಸದಾ ಸರ್ಪಶಾಯಿಯಾಗಿರಬೇಕು. ಲೋಕಕ್ಕೆ ತೇಜಃಪುಂಜರಾದ ಸೂರ್ಯಚಂದ್ರರು ರಾಹುಕೇತುಗಳ ಬಾಧೆಗೆ ಒಳಗಾಗಬೇಕು. ಇನ್ನುಳಿದ ಮಾನವರ ಪಾಡೇನು? ನನಗಾದರೋ ಅಂತಹ ಕಷ್ಟವೊಂದೂ ಇಲ್ಲ. ಮಾನವನ ಉಚ್ಚಸ್ಥಾನವಾದ ಶಿರಸ್ಸೇ ನನ್ನ ಜನ್ಮಭೂಮಿ, ನನ್ನ ಗೃಹ, ನನ್ನ ಉದ್ಯಾನ, ನನ್ನ ವಿಹಾರಭೂಮಿ, ನನ್ನ ಶಯನ—ನನ್ನ ಸರ್ವಸ್ವ. ಯಾವುದರ ಭಯವೂ ಇಲ್ಲದೆ ಸುಖವಾಗಿರುವೆನು. ಪ್ರೀತಿ ತುಂಬಾ ಇರಲಿ.

ಇಂತಿ, ಮಾಡುವ ನಮಸ್ಕಾರ,

ಹೇನುರಾಯ.

ಕಳಿದ ಸಲದ ಒಗಟಿನಲ್ಲಿ ತಪ್ಪುಗಳಿದ್ದರೆ ತಿದ್ದಿಕೊಳ್ಳತಕ್ಕದ್ದು.

ನಿಜವಾದ ಮಿತ್ರನು ಯಾವಾಗಲೂ ಮಿತ್ರನೇ.

ಮಲಬದ್ಧತೆಯೂ ಅದಕ್ಕೆ ಪ್ರಕೃತಿ ಚಿಕಿತ್ಸೆಯೂ.

ಲೇಖಕರು:—ಶ್ರೀ. ಎಸ್ ರಾಮಕೃಷ್ಣನ್, ವೆಲ್ಲೂರು.

ಮಲಬದ್ಧತೆಯು ಪ್ರಬಲ ವ್ಯಾಧಿಯಲ್ಲದಿದ್ದರೂ, ಕಾಲಕ್ರಮದಿಂದ ಹಲವು ವ್ಯಾಧಿಗಳಿಗೆ ಅದು ಮೂಲವಾಗುವುದರಿಂದ, ಈ ವ್ಯಾಧಿಗೆ ಜಾಗ್ರತೆಯಾಗಿ ಚಿಕಿತ್ಸೆ ಮಾಡಿದಷ್ಟೂ ಒಳ್ಳೆಯದು.

ಅದು ಸ್ವಭಾವಕ್ಕೆ ವಿರುದ್ಧವಾದ ಮತ್ತು ಅನಾರೋಗ್ಯಕರವಾದ ಒಂದು ಶಾರೀರಕ ಪ್ರಕೃತಿಯೇ! ತಕ್ಕ ಆಹಾರಪದಾರ್ಥಗಳನ್ನು ಸೇವಿಸದಿರುವುದು, ಕುಳಿತ ಸ್ಥಳದಲ್ಲಿಯೇ ಕೆಲಸಮಾಡುವುದು, ಆಹಾರವು ಚೆನ್ನಾಗಿ ಜೀರ್ಣಿಸಿ ರಕ್ತಗತವಾಗದಿರುವುದು, ತಕ್ಕಷ್ಟು ಶರೀರ ವ್ಯಾಯಾಮ ಇಲ್ಲದಿರುವುದು ಇವೇ ಮುಂತಾದುವು ಇದಕ್ಕೆ ಮುಖ್ಯ ಕಾರಣಗಳು.

ಮಲವು ಹೆಚ್ಚು ಕಾಲದ ವರೆಗೆ ಮಲಕೋಶದಲ್ಲಿಯೇ ತಂಗಿದರೆ, ದೇಹಕ್ಕೆ ಕಶ್ಮಲಪದಾರ್ಥಗಳನ್ನು ಹೊರಗಡೆ ತಳ್ಳುವ ಶಕ್ತಿಯು ಹೋಗಿ, ಅದೇ ವಿಷವಾಗಿ ಪರಿಣಮಿಸುವುದರಿಂದ ಅದು ಹಲವು ವ್ಯಾಧಿಗಳಿಗೆ ಆಸ್ಪದಕೊಡುವುದೇನೂ ಅತಿಶಯವಲ್ಲ.

ಮಲಬದ್ಧತೆಯಿಂದ ಬಾಧೆಪಡುವವರು ಈ ಕೆಳಗೆ ವಿವರಿಸಿರುವ ಸುಲಭವಾದ ಪ್ರಕೃತಿ ನಿಯಮಗಳನ್ನು ಆಚರಣೆಗೆ ತರುವುದೊಳ್ಳೆಯದು.

(ಅ) ನೀವು ಸೇವಿಸುವ ಆಹಾರವನ್ನು ಚೆನ್ನಾಗಿ ಅಗಿದು ನುಂಗಿರಿ ಮತ್ತು ನಿಮ್ಮ ದೇಹಕ್ಕೆ ಯಾವುದು ಒಳ್ಳೆಯದೋ ಆ ಆಹಾರವನ್ನೇ ಸೇವಿಸಿರಿ.

(ಆ) ನೀವು ಆಹಾರವನ್ನು ಅಗೆದು ಮೆತ್ತಗೆಮಾಡಿದರೆ, ಕಶ್ಮಲ ಪದಾರ್ಥಗಳು ದೇಹದಿಂದ ಹೊರಗೆ ಹೋಗಲು ಬಹಳ ಸಹಾಯಮಾಡುವುದರಿಂದ, ಪ್ರತಿದಿನವೂ ಧಾರಾಳವಾಗಿ ನೀರನ್ನು ಕುಡಿಯಿರಿ. ಮಲಗುವುದಕ್ಕೆ ಮುಂಚೆ, ಮತ್ತು ಎರಡು ಭೋಜನಗಳ ಮಧ್ಯ ಕಾಲದಲ್ಲಿ ನೀರನ್ನು ಕುಡಿಯುವುದು ಒಳ್ಳೆಯದು.

( )ಪ್ರಾತಃಕಾಲದಲ್ಲಿಯೂಸಾಯಂಕಾಲದಲ್ಲಿಯೂ ವೇಗವಾಗಿ ಸಂಚರಿಸಿರಿ, ಮತ್ತು ತಕ್ಕಷ್ಟು ನಿದ್ರೆಗೆ ಅವಕಾಶವನ್ನೇರ್ಪಡಿಸಿಕೊಳ್ಳಿರಿ.

(ಈ) ಹಲವು ವಸ್ತುಗಳನ್ನು ಬೆರಸಿದ ಸಿಹಿ ಪದಾರ್ಥಗಳ ಮತ್ತು ಪಾನೀಯಗಳ ಸೇವನೆಯಿಂದ ನಿಮ್ಮ ಜೀರ್ಣಶಕ್ತಿಯು ಕೆಡುವುದರಿಂದ ಅವುಗಳನ್ನು ಉಪಯೋಗಿಸಬೇಡಿರಿ.

(ಉ) ಬೆಳಿಗ್ಗೆ ಎದ್ದೊಡನೆಯೇ ನಿಮ್ಮ ಕೈಗಳನ್ನು ಇಳೀ ಬಿಟ್ಟು, ಕಾಲುಗಳನ್ನು ಜೋಡಿಸಿಕೊಂಡು ನೆಟ್ಟಗೆ ನಿಲ್ಲಿರಿ. ತರುವಾಯ ದೇಹವನ್ನು ಹಾಗೆಯೇ ನಿಲ್ಲಿಸಿ, ದೇಹದ ಮೇಲುಭಾಗವನ್ನು ಸಾಧ್ಯವಾದಷ್ಟು ಎಡಕ್ಕೆ ತಿರುಗಿಸಿರಿ. ಪುನಃ ನೆಟ್ಟಗೆ ನಿಂತು ಮೇಲು ಭಾಗವನ್ನು ಬಲಕ್ಕೆ ತಿರುಗಿಸಿರಿ. ಆ ಮೇಲೆ ಮೊದಲಿನಂತೆಯೇ ನಿಲ್ಲಿರಿ. ಈ ಸಾಧನೆಯನ್ನು ದಿವಸಕ್ಕೆ ಆರಾವರ್ತಿಯಾದರೂ ಮಾಡಬೇಕು. ಇದು ಅತ್ಯುತ್ತಮವೂ ಬಹಳ ಸುಲಭವೂ ಆದ ಸಾಧನವು, ಮತ್ತು ಇದರಲ್ಲಿ ಒಡನೆಯೇ ಗುಣವು ಕಂಡುಬರುವುದು.

(ಊ) ಹೊಸದಾಗಿರುವ ಮಾಗಿದ ಹಣ್ಣುಗಳನ್ನೂ ಹಸಿ ತರಕಾರಿಗಳನ್ನೂ ಉಪಯೋಗಿಸಿರಿ.

(ಎ) ಬಹಳ ಶ್ರಮಕಾರಿಯಾದ ಕೆಲಸಗಳು, ಚಿಂತೆ, ಕಳವಳ ಮುಂತಾದುವುಗಳಿಗೆ ಆಸ್ಪದಕೊಡಬೇಡಿರಿ.

(ಏ) ಭೇದಿಯ ಔಷಧಗಳನ್ನಾಗಲಿ, ಮಲವು ಜಾರಲು ಸಹಕಾರಿಗಳಾದ ಇತರ ಪದಾರ್ಥಗಳನ್ನಾಗಲಿ ಸೇವಿಸುವ ಅಭ್ಯಾಸದಲ್ಲಿ ಗುಣಭಾಗಕ್ಕಿಂತ ಅಪಾಯವೇ ಹೆಚ್ಚಾದುದರಿಂದ ಆ ಅಭ್ಯಾಸವನ್ನು ರೂಢಿಗೆ ತಂದುಕೊಳ್ಳಬೇಡಿರಿ.

ಉಪವಾಸದ ಪ್ರಯೋಜನವು.

ರೋಗನಿವಾರಣೆಯಲ್ಲಿ ಉಪವಾಸದ ಪ್ರಯೋಜನವನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ, ರೋಗದ ಸರಿಯಾದ ಸ್ವಭಾವವನ್ನು ಚೆನ್ನಾಗಿ ತಿಳಿದಿರುವುದಾವಶ್ಯವು. ರೋಗವೆಂದರೇನು? ರೋಗವೆಂಬುದು ಜೀವಸಹಿತವಾದೊಂದು ಪ್ರಾಣಿಗೆ ಅಥವಾ ಪ್ರಾಣಿಮಾತ್ರಗಳಿಗೆ ಶತ್ರುಪ್ರಾಯವಾದುದು ಅಲ್ಲ. ಶರೀರದ ಅವಯವಗಳು ಪುನಃ ತಮ್ಮ ಕೆಲಸವನ್ನು ಕ್ರಮವಾಗಿ ನಡೆಸಲು ತಮ್ಮೊಳಗೆ ಮಾಡುವ ಪ್ರಯತ್ನವೇ ರೋಗವು. ಈ ರೋಗಗಳನ್ನು ಗುಣಪಡಿಸುವ ಮತ್ತು ಶರೀರವನ್ನು ಶುದ್ಧಿಮಾಡುವ ಪ್ರಯತ್ನವು ಮೈಯಲ್ಲಿ ತಲೆದೋರಿ ವೇಗವಾಗಿ ನಡೆದರೆ, ಅದು ಪ್ರಬಲವಾದ ವ್ಯಾಧಿಯೆನ್ನಿಸಿಕೊಳ್ಳುವುದು. ತೀವ್ರವಾದ ವ್ಯಾಧಿಯು ಪ್ರಾರಂಭಿಸಿ, ಅದು ಹಾಗೆಯೇ ನಿಂತು ಹೋಗುವುದಕ್ಕೆ ಮಧ್ಯಕಾಲದಲ್ಲಿ ಕಾಣಿಸಿಕೊಳ್ಳುವ ವ್ಯಾಧಿಸೂಚನೆಗೆ ಮಧ್ಯಸ್ಥಿತಿಯೆಂದು ಹೇಳಬಹುದು. ತಿಳಿದಾಗಲಿ, ತಿಳಿಯದೆಯಾಗಲಿ ಪ್ರಕೃತಿ ನಿಯಮಾನುಸಾರವಾದ ಆರೋಗ್ಯವಿಧಿಗಳನ್ನು ಮೀರುವುದರಿಂದಲೇ ಎಲ್ಲಾ ವ್ಯಾಧಿಗಳೂ ತಲೆದೋರುವುವು. ಆಹಾರ ಜೀರ್ಣಾವಯವಗಳು ಮತ್ತು ಅವುಗಳನ್ನು ಜೀರ್ಣಿಸಿ ರಕ್ತಗತವಾಗಿ ಮಾಡತಕ್ಕ ಅವಯವಗಳು, ಇವುಗಳಲ್ಲಿ ತೋರುವ ನ್ಯೂನ್ಯಾತಿರೇಕಗಳೇ ತೀವ್ರವಾದ ವ್ಯಾಧಿ ಸೂಚನೆಗಳು. ಮನುಷ್ಯರಲ್ಲಿ ಮತ್ತು ಇತರ ಪ್ರಾಣಿಗಳಲ್ಲಿ ಅಂತಹ ವ್ಯಾಧಿ ಸಂದರ್ಭಗಳೆಲ್ಲ ಪ್ರಕೃತಿಯೇ ಆಹಾರಾಪೇಕ್ಷೆಯನ್ನು ತಪ್ಪಿಸುವುದರಿಂದ ಅದರಿಂದ ಉಪವಾಸವನ್ನೇ ವಿಧಿಸಿದಂತಾಗುವುದು. "ಪ್ರಕೃತಿಯು ಎಂದಿಗೂ ತಪ್ಪುಮಾಡುವುದಿಲ್ಲವೆಂಬುದು ನ್ಯಾಯವೇ. ಎಲ್ಲಾ ಸಂದರ್ಭಗಳನ್ನು ಆಲೋಚಿಸಿದರೂ ಮಧ್ಯಮಸ್ಥಿತಿಯಲ್ಲಿಯೂ, ಪ್ರಬಲವಾದ ಸ್ಥಿತಿಯಲ್ಲಿಯೂ ರೋಗಗಳಿಗೆ ಉಪವಾಸವೇ ಅತ್ಯುತ್ತಮವಾದ ಚಿಕಿತ್ಸೆಯು.

ಉಪವಾಸದಲ್ಲಿ ಎರಡು ವಿಧವಾದ ಗುಣಭಾಗಗಳಿರುವುವು. ಅದು ಎಲ್ಲಾ ಶುದ್ಧೀಕರಣಾಂಗಗಳ ಕಾರ್ಯಗಳನ್ನು ವೇಗವಾಗಿ ನಡೆಸಿ, ದೇಹವನ್ನು ಶುದ್ಧವಾಗಿಡುವುದು ಮತ್ತು ಆಹಾರಜೀರ್ಣಕ್ಕೂ ಶರೀರ ಪೋಷಣೆಗೂ ಸಹಕಾರಿಗಳಾದ ದೇಹಭಾಗಗಳಿಗೆ ವಿಶ್ರಾಂತಿಯನ್ನು ಕೊಡುವುದು—ನಿದ್ರೆಯಿಂದ ದೇಹವು ಆರೋಗ್ಯವನ್ನು ಹೊಂದುವಂತೆಯೇ ವಿಶ್ರಾಂತಿಕಾಲದಲ್ಲಿಯೂ ದೇಹವು ತಾನಾಗಿ ಕ್ರಮಪಡಿಸಿಕೊಳ್ಳುವುದು. ಸಾಮಾನ್ಯವಾಗಿ ಎಲ್ಲಾ ವ್ಯಾಧಿಗಳಲ್ಲಿಯೂ ಆಹಾರ ಜೀರ್ಣಕ್ಕೂ ಅದು ರಕ್ತಗತವಾಗುವುದಕ್ಕೂ ಸಹಕಾರಿಗಳಾದ ಹೊಟ್ಟೆಯೂ, ಕರುಳುಗಳೂ ಬಾಧೆಗೊಳಗಾಗುವುವು. ಉಪವಾಸದಿಂದ ಶರೀರಕ್ಕೊದಗುವ ವಿಶ್ರಾಂತಿಯ ಮೂಲಕ ಪ್ರಕೃತಿಗೆ ಅವಯವಗಳಲ್ಲಿ ತೋರುವ ಯಾವ ಬಾಧೆಯನ್ನಾದರೂ ಗುಣಪಡಿಸಲು ಅವಕಾಶವನ್ನು ಕೊಟ್ಟಂತಾಗುವುದು. ಸಾಮಾನ್ಯವಾಗಿ ಜೀರ್ಣಾವಯವಗಳಿಗೆ ಆಗುವ ಅಪಾಯವು, ಅವುಗಳ ಒಳಗಡೆಯಲ್ಲಿ ಮೃದುವೂ ಸೂಕ್ಷ್ಮವೂ ಆದ ಭಾಗಗಳಲ್ಲಿ ಯಾವುದಾದರೂ ಭಾಗಗಳನ್ನು ತೋರ್ಪಡಿಸುವುದರಿಂದ ತಕ್ಕಷ್ಟು ಕಾಲ ಉಪವಾಸ ವ್ರತವನ್ನಾಚರಿಸಿದ ಮೇಲೆ ಆ ಅವಯವಗಳಿಗೆ ಹೊಸ ಬಟ್ಟೆಯನ್ನು ತೊಟ್ಟಂತಾಗುವುದು. ಇದರಿಂದ ಆಹಾರಜೀರ್ಣಕಾರ್ಯಗಳು ಚೆನ್ನಾಗಿ ನಡೆದು ಆಹಾರವು ಸುಲಭವಾಗಿ ಜೀರ್ಣಿಸಿ ರಕ್ತಗತವಾಗುವುದು, ಮತ್ತು ದೇಹವೆಲ್ಲವೂ ಸಂಪೂರ್ಣಾರೋಗ್ಯ ಸ್ಥಿತಿಯನ್ನೂ ಹೊಂದುವುದು.

ಸ್ವರ್ಗವಾಸಿ ವಿ. ಶ್ರೀನಿವಾಸ ಕಾಮತರವರು.

ಶ್ರೀಯುತ ವಿ. ಶ್ರೀನಿವಾಸ ಕಾಮತರೆಂದರೆ ಸರಳ, ನಿರ್ಮಲ, ಪ್ರಯೋಜನಕಾರಕ, ಆದರ್ಶಪ್ರಾಯಕ, ಸಾಹಸಪೂರ್ವಕ ಜೀವನ ನಡೆಸಿದ ಗಂಭೀರ ವ್ಯಕ್ತಿ. ಅವರ ಗ್ರಹಜೀವನ—ಉಡಿಗೆ ತೊಡಿಗೆಗಳು ಸರಳ; ಅವರ ಮಾತುಕತೆ, ಹೃದಯ, ಆಲೋಚನೆಗಳು ನಿರ್ಮಲ; ಅವರ ಯತ್ನ, ಕಾರ್ಯಕಲಾಪಗಳು ಪ್ರಯೋಜನದಾಯಕಗಳೇ! ಅವರ ನಿತ್ಯನೈಮಿತ್ತಿಕ ಆಚಾರವಿಚಾರಗಳು ಉಚ್ಚ ಆದರ್ಶಪ್ರಾಯಕವೇ. ಅವರ ಸಕಲ ಕೆಲಸಗಳು ಸಾಹಸಪೂರ್ವಕವೇ!

ಅಗಲವಾದ ಮುಖ, ಯಾವಾಗಲೂ ಹುಬ್ಬು ಗಂಟಿಕ್ಕಿಕೊಂಡಿರುವ ಯೋಚನಾಪರವಾದ ವದನ ತೇಜಸ್ಸು, ವಿಶಾಲವಾದ ಹಣೆ, ಅಧಿಕಾರ ಬಾಹುಲ್ಯದಿಂದ ಸದಾ ಚಿಂತನೆಮಾಡುತ್ತಿರುವ ಮೌನವ್ರತ, ಬುದ್ಧಿಕುಶಲತೆ, ಕಾರ್ಯವಿಚಕ್ಷಣತೆ, ಧೈರ್ಯೋತ್ಸಾಹಗಳನ್ನೂ ಬೇರೆ ಛೊಡ್ಡಿ ತೋರಿಸುವ ಅವರ ಹಣ್ಣಾದ ಮೀಸೆರಾಶಿಗಳಿಂದ ಅವರು ಬಹು ಗಂಭೀರವ್ಯಕ್ತಿಯೆ—ಅವರ ಮುಖ ಪ್ರಭಾವವು ಮಾತ್ರ ಗಂಭೀರ—ಅಂತರ್ಯವು ಅತ್ಯಂತ ಮೃದು—ಮಾಧುರ್ಯ. ಆ ಮಾಧುರ್ಯದಲ್ಲಿಯೂ ಪ್ರೇಮರಸ, ನಿರ್ಮಲಾಂತಃಕರಣವು ತುಂಬಿತ್ತು.

ಅವರಿಗೆ ಹಳೆಯದರಲ್ಲಿ ಅಭಿಮಾನ ಬಹಳ. ಹಾಗೆಂದು ಹೊಸದರಲ್ಲಿ ತಿರಸ್ಕಾರಭಾವವಿಲ್ಲ. ಅದರಲ್ಲಿ ತುಂಬಾ ಆದರ. ಯುವಕರಿಗೆ ಅವರು ಸದಾಚಾರ ವಿಚಾರಗಳನ್ನು ತೋರಿಸುವ ಭಯೋತ್ಪಾದಕ ಗುರುವಾಗಿದ್ದರು. ಮುದುಕರಿಗೆ ಶುದ್ಧ ಹೃದಯದ ಪ್ರೇಮಪೂರಿತ ಮಿತ್ರರಾಗಿದ್ದರು. ವೃದ್ಧರಲ್ಲಿ ತಾರುಣ್ಯಚೈತನ್ಯವನ್ನು ತುಂಬುವ ಚೇತನಾತ್ಮಕ ವ್ಯಕ್ತಿಯಾಗಿದ್ದರು. ಮೊಣಕಾಲಿನ ವರೆಗೆ ಒಂದು ಶುದ್ಧ ಕಚ್ಚೆಯನ್ನುಟ್ಟು, ಎದೆಗುಂಡಿಯಿಂದ ಎದುರು ನಡುವಿನ ವರೆಗೆ ಮುಚ್ಚಿರುವ ಒಂದು ಸ್ವದೇಶೀವಸ್ತ್ರದ ಅಂಗಿಯನ್ನು ಧರಿಸಿ ಹೆಚ್ಚಿನ ವೇಳೆ ಆರುಮೂರಾಣೆ ಕ್ರಯದ ಕಪ್ಪು ಖಾದಿ ಟೊಪ್ಪಿಯನ್ನಿಟ್ಟು, ಕೈಯಲ್ಲೊಂದು ಬೆತ್ತವನ್ನು ಹಿಡಿದುಕೊಂಡು ಶ್ರೀಯುತರು ಹೊರಟರೆಂದರೆ ಏಕೋ ಏನೋ, ಅಪರಿಚಿತರು ಕೂಡಾ ಅವರನ್ನು ಒಂದರೆಕ್ಷಣ ದೃಷ್ಟಿಯಿಟ್ಟು ನೋಡುತ್ತಿದ್ದರು—"ಇವನಲ್ಲಿ ಶಾಂತತೆ, ಗಾಂಭೀರ್ಯಗಳು ಮೂರ್ತಿಮತ್ತಾಗಿವೆ" ಎಂದಂದುಕೊಳ್ಳುತ್ತಿದ್ದರು.

ಒಬ್ಬನಲ್ಲಿ ಹತ್ತು ಸದ್ಗುಣಗಳಿದ್ದು ಒಂದು ದುರ್ಗುಣವಿದ್ದರೆ ಆ ದುರ್ಗುಣವನ್ನೇ ನಾವು ಉತ್ಪ್ರೇಕ್ಷಿಸಿ ಅದನ್ನು ವಿಶಾಲವಾದ ಬಟ್ಟಬಯಲಿಗೆಳೆಯುವುದು ಸಾಧಾರಣವಾಗಿ ಮನುಷ್ಯರಲ್ಲಿ ರೂಢಿ. ಎಂತಹ ಪಾವನಮೂರ್ತಿಯಲ್ಲೂ ಮಾನವನು ಕಾಣದ ನ್ಯೂನ್ಯತೆಗಳು ಕಡಿಮೆ. ಹಾಗೆ ಒಂದೇ ದೃಷ್ಟಿಯಿಂದ ನೋಡಿದರೆ ಲೋಕವೇ ಹಾಳು. ದ್ವಿಪಕ್ಷಗಳ ವಿಮರ್ಶನಾದೃಷ್ಟಿಯಿಂದ ನೋಡಿದರೆ ಒಬ್ಬನ ಗುಣಾವಗುಣಗಳ ತುಲನೆಯು ಯೋಗ್ಯವಾಗಿಯೇ ಆಗುತ್ತದೆ. ಶ್ರೀ ಕಾಮತರ ಸಾವಿರ ಸಾಹಸಗಳಲ್ಲಿ ನೂರು ಅಯೋಗ್ಯವೆಂದು ಬಾಯಿಬಡಕರಿಗೆ ಕಂಡು ಬರಬಹುದು. ಅಂದರೆ ಮಿಕ್ಕುಳಿದ ಯೋಗ್ಯವಾದುವುಗಳನ್ನು ಮರೆಯಲು ಸಾಧ್ಯವೇ?

ಶ್ರೀಯುತ ವಿ. ಎಸ್. ಕಾಮತರು ದಿವಂಗತ ಪಡೇರಬೆಟ್ಟು ರಾಯಪ್ಪ ವಾಸುದೇವ ಕಮ್ತಿರ ತೃತೀಯ ಪುತ್ರ. ಗೌಡಸಾರಸ್ವತರು. ಇಲ್ಲಿಯ ಕೆನರಾ ಹ್ಯಾಸ್ಕೂಲಿನಲ್ಲಿ ವಿದ್ಯಾರ್ಥಿಜೀವನವನ್ನು ಸಾಧಾರಣ ಹುಡುಗನಂತೆಯೇ ನಡೆಸಿದರು,—ಎಫ್. ಎ. ಪರೀಕ್ಷೆಗೆ ನಿಂತು ನಿರುತ್ತೀರ್ಣರಾದರು. ಬಾಲ್ಯದಿಂದಲೂ ವ್ಯಾಪಾರದ ಅಭಿರುಚಿಯು ಸ್ವಲ್ಪವಿದ್ದುದರಿಂದ ಸ್ವತಂತ್ರ ಜೀವನೋಪಾಯದ ಬಗ್ಗೆ ಅನುಕೂಲ ಸಂಧಿಯನ್ನು ಹುಡುಕುತ್ತಿದ್ದರು. ಕೊನೆಗೆ ಕೈ. ವಾ. ಉಪೇಂದ್ರಪೈಗಳೆಂಬ ಹೆಸರುವಾಸಿಗಳೊಬ್ಬರಿಂದ ಸಂಸ್ಥಾಪಿಸಲ್ಪಟ್ಟ 'ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ'ನಲ್ಲಿ ಭಾಗಿಗಳಾಗಿ ಸೇರಿಕೊಂಡರು. ಸ್ವಲ್ಪ ಸಮಯದಲ್ಲಿ ಶಾರದಾ ಮುದ್ರಣಾಲಯದ ಜನನವಾಯಿತು. ಕೆಲ ದಿನಗಳಲ್ಲಿ 'ಸ್ವದೇಶಾಭಿಮಾನಿ' ವಾರ್ತಾ ಪತ್ರಿಕೆಯು ಹೊರಟಿತು. ವ್ಯಾಪಾರ ಪಹಿವಾಟಗಳಲ್ಲಿ ಹೆಸರಾಗುತ್ತಿರುವಾಗ, ದಿವಂಗತ ನರಸಿಂಗ ಮರ್ತು ಭಂಡಾರಿ, ಅಪ್ಪಾಜಿರಾವ್ ಮೊದಲಾದ ಕೆಲವರಿಂದ ಸಣ್ಣ ರೀತಿಯಿಂದ ಸ್ಥಾಪಿಸಲ್ಪಟ್ಟ ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿ ಎಂಬ ಮೋಟರ್ ಸಂಸ್ಥೆಯ ಆಡಳಿತೆ ಬಹುಭಾರವನ್ನು ವಹಿಸಿ ಸಹಿಸಿಕೊಂಡರು. ಅಂದಿನಿಂದ ಮೊದಲ್ಗೊಂಡು ಕಾಮತರ ಜೀವನಪ್ರವಾಹವು ವಿಶೇಷ ವೇಗಾವೇಗಗಳಿಂದ ಹರಿಯಲುಪಕ್ರಮಿಸಿತು. ೧೯೨೦—೨೫ ವರ್ಷಗಳು ದಾಟುತ್ತಲೇ ಸಿ. ಪಿ. ಸಿ. ಕಂಪೆನಿ ಲಿಮಿಟೆಡ್‌ನ ಬಸ್ಸುಗಳು ಇಡೀ ದಕ್ಷಿಣ ಹಿಂದೂದೇಶದಲ್ಲಿ ಪಸರಿಸಿ, ಓಡ್ಯಾಡಿ, ವ್ಯಾಪಾರಸಾಪಾರಗಳ ಪ್ರವರ್ಧನೆಗೆ ಅವಕಾಶವಾಯಿತು. "ದಕ್ಷಿಣ ಕನ್ನಡದ ಹೆನ್ರಿಫೋರ್ಡನು ವಿ. ಶ್ರೀನಿವಾಸ ಕಾಮತ್" ಎಂದು ಅನೇಕ ಮಹನೀಯರೆನ್ನುವಂತಾಯಿತು. ದಿವಂಗತರು ಸಿ. ಪಿ. ಸಿ. ಕಂಪೆನಿಯ ಸೇವೆಯಲ್ಲೇ ತಲ್ಲೀನರಾದರು. ಅದರಲ್ಲೇ ಲೀನರಾದರು. ಸಾಯುವ ಕಾಲ (ತಾ. ೧೫—೧೦—೧೯೩೭) ರಲ್ಲಿ ಇವರಿಗೆ ೫೨ ವರ್ಷ ಪ್ರಾಯವು ದಾಟಿದ್ದಿತು.

ದಿವಂಗತರು ಬಡವರಿಗೆಂತು ಸಹಾಯಕರಾಗಿದ್ದರು?—ಬಡವರು ಉದ್ಯೋಗಾರ್ಥವಾಗಿ ತನ್ನ ಬಳಿಗೆ ಬಂದರೆ ಅವರ ಕಡೆಗೆ ಬೆನ್ನುಹಾಕುತ್ತಿರಲಿಲ್ಲ. "ಕೆಲಸ ಮಾಡಿರಿ—ತಿನ್ನಿರಿ" ಎಂಬ ಸಂದೇಶದೊಡನೆ ಅವರು ಅನೇಕಾನೇಕ ಬಡಜನರಿಗೆ ಜಾತಿಭೇದವನ್ನಿಡದೆ ಕೆಲಸ ಕೊಡುತ್ತಿದ್ದರು. ಬಡವರೂ ಐಶ್ವರ್ಯವಂತರೂ ಅವರಿಗೆ ಒಂದೇ—ಸಮಾನರು. ಧನರಹಿತನೆಂದು ಬಡವನನ್ನು ಗೌರವರಹಿತ ದೃಷ್ಟಿಯಿಂದ [illegible]ವುದೂ, ಸಿರಿಸಹಿತನೆಂದು ಐಶ್ವರ್ಯವಂತನನ್ನು [illegible] ಯಿಂದ ಸ್ವೀಕರಿಸುವುದೂ ಶ್ರೀನಿವಾಸ ಕಾಮತರ ಅಭ್ಯಾಸವಿರಲಿಲ್ಲ. ಯಾರು ಧರ್ಮ. [illegible] ಕಾಮತರ [illegible]

ದಿವಂಗತ ಶ್ರೀನಿವಾಸರ ಆತ್ಮಕ್ಕೆ ಶ್ರೀ ಶ್ರೀನಿವಾಸನು

ಸದಾ ಶಾಂತಿಯನ್ನೀಯಲಿ! — [illegible]

([illegible])

(TIT-BITS)

ಮೈಸೂರ್ ನರ್ಸಣ್ಣನ ಟೀಕೆ!

(ಟಿಟ್-ಬಿಟ್ಸ್)

ಗುಡ್‌ನೈಟ್ ವಾಚಕ್ರೆ! ಗುಡ್‌ನೈಟ್! ಈ ಸಲಾ ನನ್ನ ಥಕಥೈ, ನನ್ನಾನಿಗಳೆಲ್ಲ ಇಲ್ಲವಯ್ಯಾ! ಕಾರಣ ಏನ್ ಗೊತ್ತುಂಟಾ? ನನ್ನ ಹೆಂಡ್ತಿ ಗುಂಗಮ್ಮಳಿಗೆ ಮೈಸೂರಲ್ಲಿ ಭಾರೀ ಹೊಟ್ಟೆ ನೋವಂತೆ! ಅವಳಾ ನೋವಿಂದ ನಂಗೆ ಇಲ್ಲಿ ಊಟಾ ಕೂಡಾ ಹೊಕ್ಕುವುದಿಲ್ಲ. ಅಯ್ಯೋ ಪಾಪ! ಅವಳ ಅವಸ್ಥೆ ಹೇಂಗೋ ಆ ನಾರಾಯಣ ದೇವ್ರೆ ಬಲ್ಲ!

× × × × ×

ಮೊನ್ನೆ ಅವ್ಳು ನಂಗೊಂದು ಪತ್ರಾ ಬರ್ದಿದಿದ್ಳು. ವಿಳಾಸ ಎಲ್ಲಾ ಸರೀ ಬರ್ದ್ದಿತ್ತು. ಆದ್ರೆ ಮೈಸೂರ್ಲ್ಲಿ ೧೮ನೇ ದಿನ ಪೋಸ್ಟ್ ಮಾಡಿದ ಪತ್ರ ಸುಮಾರು ಆರು ದಿವ್ಸಗಳ ಮೇಲೆ ನಂಗೆ ದೊರೆಯಿತು! ಯಾರೋ ಪೋಸ್ಟ್ ಮ್ಯಾನನು ಯಾರ್‍ಯಾರ ಕಾಗ್ದವನ್ನು ಯಾರ್‍ಯಾರ ಕೈಲಿ ಬಟ್ವಾಡೆ ಮಾಡ್ವ ಅಭ್ಯಾಸಮಾಡಿದ್ದಾನಂತೆ! ಇಂತಹ ಕಂಪ್ಲೈಂಟ್ ಒಂದಲ್ಲ, ಎರಡಲ್ಲ, ಅನೇಕ ಉಂಟು ರಾಜಾ. ನಿಮ್ಮೂರು ಪೋಸ್ಟ್ ಮ್ಯಾನರು ಹಿಂಗೇ ಅಜಾಗ್ರತೆ ಮಾಡ್ತಾರೇ?

× × × × ×

ಆ ಕಾಗ್ದ ಒಡ್ದು ಓದುತ್ತೇನ್ರಿ:—ಪ್ರಿಯ ಚಂದದ ಗಂಡಸಿಗೆ ನಿಮ್ಮ ಅಂದದ ಹೆಂಡ್ತಿ ಗುಂಗಮ್ಮಳು ಬರ್ದ ಕಾಗ್ದ. ತರುವಾಯ ನನ್ನ ಆಶೀರ್ವಾದದಿಂದ ನೀವು ಸುಖ ಅಷ್ಟೆ. ಈಗ ನಂಗೆ ಹೊಟ್ಟೆ ನೋವು; ಹೊಟ್ಟೆ ತೋರ್ಸ್ವದಿಲ್ಲವಾದರೂ ಬೇಗನೇ ಮಗು ಹೆರ್ಲಿಕ್ಕೆ ಇದ್ದೇನೆ. ಖರ್ಚಿಗಾಗಿ ಜರೂರಾಗಿ ೬೦ ರೂಪಾಯ್ಗಳನ್ನು ಕಳ್ಸಿರಿ" ಎಂದು ಬರ್ದಿತ್ತು.

× × × × ×

ಎದೆ ದಸಕ್ಕ ಅಂದುಬಿಟ್ಟಿತು. ಕೂಡ್ಲೆ ಬಡವ್ರ ಬಂಧು ಸಂಪಾದಕ್ರ ಬಳಿಗೆ ಓಡಿದೆ. ಪತ್ರಾ ತೋರ್ಸಿ "೬೦ ರೂಪಾಯ್ ಸಾಯಮಾಡ್ಬೇಕು ಸ್ವಾಮಿ" ಎಂದೆ. ಪಾಪ! ಸಂಪಾದಕ್ರ ಮುಖಾ ಕರ್‍ರಗಾಯಿತು. "ಊರೊಳಗಿನ ಕೆಲವು ಚಂದಾದಾರ ಮಹನೀಯ್ರು ೭ ತಿಂಗ್ಳಾದರೂ 'ಬಡವ್ರ ಬಂಧೂ'ವಿನ ಹಣಾ ಕೊಡ್ಲಿಲ್ಲಾ ನರ್ಸಣ್ಣನವ್ರೇ, ಅದು ಬಂದೊಡನೆ ಕೊಡ್ತೇನೆ" ಅಂದುಬಿಟ್ರು. ಅಬ್ಬಬ್ಬಾ ಕೆಲ ಚಂದಾದಾರ್ರ ಉದಾರತೆಯೇ?

× × × × ×

ಕೊನೆಗೆ ಒಬ್ಬ ದೋಸ್ತಿಯವರ ದೋಸ್ತಿ ಹಿಡಿದೆ. ದೊಡ್ಡವ್ರಾದುದರಿಂದ ೬೦ ರೂಪಾಯ್ಗೆ ಒಂದು ಚಕ್ ಕೊಟ್ರು. ಚೆಕ್ಕು ತೆಗೆದ್ಕೊಂಡು ಬೇಂಕಿಗೆ ಹೋದೆ. ಅದನ್ನು ಕೇಶ್ ಮಾಡ್ಲಿಕ್ಕೆ ೨ ತಾಸು ತಗಲಿತು.! "ನಿಲ್ಲಪ್ಪ, ನಿಂಗೆ ತೋರ್ಸ್ವದಿಲ್ಲವೆ! ಕೈಲಿ ತುಂಬಾ ಕೆಲಸ. ನಂಗೇನು ನಾಲ್ಕು ಕೈ ಉಂಟೇ?" ಎಂದು ಕಿಲಾರ್ಕರ ಕಿಲಾಡಿತನ! ನನ್ನ ದೊಡ್ಡ ಹೊಟ್ಟೆಗೆ ಕೂಡಾ ಮರ್‍ಯಾದೆ ಕೊಡುವ ಪುಣ್ಯ ಆ ಬೇಂಕಿನವರಿಗಿಲ್ಲ.

× × × × ×

ಹೇಗೂ ಹಣಾ ದೊರೆಯಿತು. ಮಣಿಯಾರ್ಡರು ಫೋರ್ಮು ಬರ್ದು ಪೋಸ್ಟಾಫೀಸಿಗೆ ಹೋದೆ. ಘಂಟೆ ಮೂರಾಗಲಿಕ್ಕೆ ೧ ಘಂಟೆ ಇತ್ತು. ಮಣಿಯಾರ್ಡರ್ ಕಿಲಾರ್ಕಕರ ಎದ್ರು ಹತ್ತದಿನೈದು ಜನಾ ನಿಂತು ಮಣಿಯಾರ್ಡರು ಮಾಡುತ್ತಿದ್ರು. ನಾನು ನನ್ನ ದೊಡ್ಡ ಹೊಟ್ಟೆಯನ್ನು ಅವರ ಎಡೆಗೆ ತುರುಕಿಸಲಾರದೆ ಹಿಂದೆ ನಿಂತೆ. ಸೊಲ್ಪ ಹೊತ್ತಾಯಿತು. ಮತ್ತೂ ಮತ್ತೂ ಜನ್ರು ಬರುತ್ತಿದ್ದಾರೆ. ಎಲ್ಲ ಮಣಿಯಾರ್ಡರ್ ಮುಗೀವಾಗ ಜಸ್ಟ್ ತ್ರೀಯೊಕ್ಲೋಕ್ ಆಯಿತು! ಒಡನೆ ಕಿಲಾರ್ಕರು ಹೇಳಿದ್ರು "It is 3 o'clock; closed!". ನಂಗೆ ಅಶ್ಚರ್ಯ ಆಯ್ತು. ಮೂರು ಗಂಟೆ ಹೊಡಿಯಲು ೧ ಘಂಟೆ ಮೊದ್ಲಾಗೀ ಬಂದಿದ್ದು, ಈ ಕಿಲಾರ್ಕರ ಅರ್ಜೆಂಟ್ ಕೆಲ್ಸದಿಂದ ಹಿಂದೆಬಿದ್ದುದು ನನ್ನ ತಪ್ಪೆ? ನಾನು ಹೇಳ್ದೆ:—"ಸ್ವಾಮಿ, ನಾನು ಮೂರು ತಾಸಿಗೆ ಮೊದ್ಲೇ ಬಂದಿದ್ದೆ. ನನ್ನ ಹೆಂಡ್ತಿಗೆ ಹೊಟ್ಟೆ ನೋವು ಆಗ್ತಿದೆ. ಮನಿಯಾರ್ಡರ ಕಾದು ಕೂತಾಳು. ಪಾಪದ ಹುಡ್ಗಿ. ದಯ್ಮಾಡಿ ಇವತ್ತು ಸ್ವೀಕರ್ಸಬೇಕು" ಅಂದೆ.

ಆದರೆ ಕಿಲಾರ್ಕರು ರಾಯ್ರು "No! No!! No!!!" ಎಂದು ಬೊಬ್ಬೆ ಹಾಕಿದ್ರು,

× × ×

ಇವರ ಸ್ಟ್ರಿಕ್ಟ್ ಕಾನೂನುಗಳಿಂದ ನನ್ನಂತಹ ಬಡವ್ರು ಪಡ್ತಾ ಸರ್ಕಾರ್. ಸರ್ಕಾರ್‌ವು ಇವ್ರನ್ನು ಕೇಳ್ವುದಿಲ್ವೇ. ಇಂತಹ ಡಿಸೋರ್ಡರ್ ಎಷ್ಟು ಪೋಸ್ಟಾಫೀಸುಗಳಲ್ಲಿ ಉಂಟಾ ಯಾವ ದೇವ್ರಿಗೆ ಹ್ಯಾಂಗೆ ಗೊಂತು! ಕಿಲಾರ್ಕರ್ರು ಸೊಲ್ಪ ಕರುಣೆ ಇಡ್ಬೇಕು ಖಾವಂದ್! ಸರ್ಕಾರ ನೋಕರದ್ದೇ ಈಗ ಊರು ಎಲ್ಲಾ. ಪೋಲೀಸ್ರಿಗೆ—ಸಬಿನ್ಸ್‌ಪೆಕ್ಟ್ರಗಳಿಗೂ, ಗುಮಾಸ್ತರುಗಳಿಗೂ ಈಗ ಊರು ಸಿಕ್ಕಿದೆ ಹಾಂಗೆರೋಗ ಅವ್ರು ಎಷ್ಟು ಚಂದಾದಿಂದ ನಡ್ಸಬೇಕು!

× × × × ×

ಅತ್ಲಾಗಿನಿಂದ ಮನಿಯಾರ್ಡರ್ ಮಾಡಿದ ಮೇಲೆ ಇತ್ಲಾಗಿನಿಂದ ನನ್ನ ಮಗಾ ಮೈಸೂರ್ ದಾಸಣ್ಣನನ್ನು ಮೈಸೂರಿಗೆ ಕಳ್ಸಬೇಕೆಂದು ನಿಮ್ಮೂರ ರೈಲ್ವೇ ಸ್ಟೇಷನಿಗೆ ಹೋದೆ. ಭಾರೀ ಜನದ ನಡ್ವೆ ತಿಕೀಟ್ ಪಡೆಯಬೇಕೆಂತ ತಿಕೀಟ್ ಆಫೀಸಿನ ಕಿಟ್ಕಿನ ಒಳ್ಗೆ ಕೈಹಾಕಿದ್ದೇನೆ ಅಷ್ಟೆ ರಾಜಾ! ನನ್ನ ಒಳ್ಗಿನ ಜೇಬಿಗೆ ಯಾರೋ ಕೈಯಿಟ್ಟಂತೆ ಜುಮ್ಮಾಯ್ತು. ಫಕ್ಕನೆ ಒಂದೆ ನುಸುಳಿ ಬಂದು ಜೇಬಿಗೆ ಕೈಯಿಡ್ತೇನಿ!—ನನ್ನ ಪಕೀಟ್ ಕಾಣೆ! ಥೂ! ನಿಮ್ಮೂರ್ ಹಾಳು ಊರು!

× × × × ×

ಮಗ್ನಿಗೆ ತಿಕೀಟ್ ಕೊಟ್ಟು ನಾನು ಒಂದು ಪ್ಲೇಟ್‌ಫೋರ್ಮು ತಿಕೀಟ್ ಪಡೆಯೋಕೆ ಹೋದೆ ಸಾರ್. ಘಂಟೆ ಕಾಲು ಆದ್ರೂ ನಂಗೊಂದು ಪ್ಲೇಟ್‌ಫೋರ್ಮು ತಿಕೀಟ್ ದೊರೆಯಲಿಲ್ಲ. ಹಣಾ ಕೊಟ್ಟು ತಿಕೀಟ್ ಸಿಗುವುದಿಲ್ಲವಾದ್ರೆ ಏನು ಕಷ್ಟ! ಅಷ್ಟರಲ್ಲಿ ಕೋ ಕೋ ಕೋೀೀ ಅಂದಿತು ರೈಲ್‌ಬಂಡಿ. ಮಗ ರೈಲ್ ಹತ್ತಿದ—ಹೋಗ್ಬಿಟ್ಟ. ನಂಗ ಪ್ಲೇಟ್ ಫೋರ್ಮಿಗೆ ಹೋಗಲಿಕ್ಕಾಗಲಿಲ್ಲ. ಪಾಪ ನನ್ನ ಮಗಾ! ಹೋಗೋಗ ಶೇಕ್‌ಹೇಂಡ್ ಮಾಡ್ಲು ಆಗ್ಲಿಲ್ಲ. ಈ ರೈಲ್ವೇಯವರ ಉಪದ್ರ ಕಡಿಮೆಯಾಗುತ್ತಿದ್ದರೇ?

× × × × ×

ನನ್ ಮುಖಾ ಬಾಡಿ ಹೋಯ್ತು. ಹೆಂಡ್ತಿಯ ಹೊಟ್ಟೆ ನೋವು ಮೈಸೂರಲ್ಲಿ ಆದ್ರೂ, ಮಂಗ್ಳೂರ್ಲ್ಲಿದ್ದ ನಂಗೂ ಹೆರ್ಗೆ ನೋವು ಆದಂತೆಯೇ ಭಾಸವಾಯ್ತು. ರೈಲ್ ಸ್ಟೇಷನಿನಲ್ಲಿ ಒಂದು ಗಾಡೀ ಮೇಲೆ ಕೂತು ಮನ್ಗೆ ಬಂದೆ. ಗಾಡಿಂದ ಕೆಳಗಿಳ್ದು ಆರಾಣೆ ಕೊಟ್ಟೆ ರಾಜಾ! ಗಾಡೀವಾಲಗೆ ಕೋಪಬಂತಲ್ಲಾ! "ಅದಾಗೋದಿಲ್ಲಾ, ಹೊಟ್ಟೆ—ಸ್ವಾಮಿ! ಆರಾಣೆ ಸಾಲ್ದು—ಇನ್ನೂ ೨ ಆಣೆ ಬೇಕು" ಎಂದು ಹಟಾ ಹಿಡ್ದ. ನಾನು "ಕೊಡೋದಿಲ್ಲ" ಅಂದೆ. ನಿಮ್ಮೂರ ಗಾಡೀವಾಲ್ರು ಒಳ್ಳೇ ಗುಣಾದವ್ರು ಎಂತ ನಂಗೆ ಗೊಂತು. ಅಷ್ಟರಲ್ಲಿ ಆ ಗಾಡಿಯವ್ನಿಗೆ ಕೋಪಾ ಬಂದ್ಬಿಟ್ಟು ನನ್ರ ಹೊಟ್ಗೆ ಬಲವಾಗಿ ಏಟು ಹೊಡ್ದು, ಗಾಡಿ ಹತ್ಕೊಂಡು ಓಡ್ದ.

× × × × ×

ದೊಡ್ಡ ಹೊಟ್ಗೆ ಹೊಡ್ದ ಪೆಟ್ಟಲ್ಲವೇ! ನಾನು ಮೂರ್ಛೆತಪ್ಪಿ ಬಿದ್ದಿದ್ದೆ. ನನ್ನನ್ನು ಯಾರೋ ಪುಣ್ಯಾತ್ಮರು ಆಸ್ಪತ್ರೆಗೆ ಕೊಂಡೊಯ್ದಿದ್ದರು. ಸ್ಮೃತಿ ಬಂದು ಎದ್ದು ನೋಡ್ತೇನೀ—ನಾನು ಚಾವಡಿಯ ಬೆಂಚಿನ ಮೇಲೆ ಮಲ್ಗಿದ್ದೆ. ಯಾರೋ ಪುಣ್ಯಾತ್ಮರು ಮಲ್ಗಿಸಿದ್ರು. ಕೆಲವು ಕಂಪೌಂಡ್ರುಗಳು ನನ್ನ ಬಳಿ ಬಂದು ನನ್ನ ಹೊಟ್ಟೆ ನೋಡಿ, ನಕ್ಕು ಹೋಗುತಿದ್ರು. ನೋಡ್ವ ಇವ್ರ ಆಟಾ ಎಂತ ಸುಮ್ಮಗೆ ಕಣ್ಮುಚ್ಚಿ ಉದ್ದಕ್ಕೆ ಮಲ್ಗಿದೆ. ಅಷ್ಟರಲ್ಲಿ ದಾಕ್ತಾರ್ರು ಬಂದ್ರು. ನನ್ನ ಹೊಟ್ಟೆ ಮೇಲೆ ಕೈಹಾಕಿ ತಟ್ಟಿ, ಒಳ್ಗೆ ಹೋದ್ರು ಮತ್ತೆ ಕಾಣ್ಲಿಲ್ಲ. ಕೆಲವು ಕಂಪೌಂಡ್ರು ಹೇಳ್ತಾರ್ರೀ "ಹೊಟ್ಟೆ ದೊಡ್ಡು, ಕಾಸಿಲ್ಲ ಕಿಶೇಲಿ. ಮಲಗ್ಲಿಯಯ್ಯಾ ಅಲ್ಲಿ" ಅಂತ. ನೋಡಿ ಕಾಸು ಇದ್ರೆ ಎಲ್ರೂ ಇದ್ದಾರೆ. ಇಲ್ಲವಾದ್ರೆ ಯಾರೂ ಇಲ್ಲ. ದೇವ್ರೇ.

× + × × ×

ವಾಚಕ್ರೇ ವ್ಯಸನಪಡಬೇಡ್ರಿ—ಹೊಟ್ಟೆ ನೋವು ಗುಣಾಗುತ್ತೆ, ಗುಡ್‌ನೈಟ್—ಬರ್ತೇನ್ರೀ.

ಕಷ್ಟ ಬಂದಲ್ಲದೆ ಮಿತ್ರನ ಗುಣ ಗೊತ್ತಾಗಲಿಕ್ಕಿಲ್ಲ.

> ಹಾಸ್ಯವನ್ನು ಅವಸರದಿಂದ ಓದುವುದಲ್ಲ. ಅದರಲ್ಲಿನ ಶಬ್ದಾರ್ಥದಲ್ಲಡಗಿರುವ ಹಾಸ್ಯರಸವನ್ನು ಹೀರಬೇಕು.

ಬಡವರ ಬಂಧು ಹಾಸ್ಯೌಷಧಾಲಯ.

> ಹಾಸ್ಯಸಂಗ್ರಹಕಾರರು ಬೇಕಾಗಿದ್ದಾರೆ. ಉತ್ತಮ ಹಾಸ್ಯಗಳಿಗೆ "ಸುಸ್ವಾಗತ" ವಿದೆ.

ಡಾಕ್ಟರರು:

ಪುತ್ತೂರಿನ ವಿದ್ವಾನ್ ಮುತ್ತಂಭಟ್ಟರು, ನಿರಕ್ಷರಕುಕ್ಷಿ.

ಅತೀ ಅಗ್ಗ! | **ಮನೋರೋಗಕ್ಕೆ ಕೆಳಗಿನವು ದಿವ್ಯೌಷಧ.** | **ನಗುವವರಿಗೆ ಧರ್ಮ!**

ತಂದೆ:–(ಮಗಳನ್ನು ಕುರಿತು) ಈಗ ಬಂದಿದ್ದವರನ್ನು ನೀನು ಒಪ್ಪಿದ್ದಲ್ಲಿ ಅವರಿಗೆ ನಿನ್ನನ್ನು ಕೊಟ್ಟು ನಾಳೆ ಮಾಘ ಮಾಸಕ್ಕೆ ಲಗ್ನ ಮಾಡುತ್ತೇನೆ.

ಮಗಳು:–ಅಪ್ಪಾಜೀ, ಅವರು ಗಂಡಸರೇ...

ತಂದೆ:–(ನಗುತ್ತಾ) ಹೌದಮ್ಮಾ.

ಮಗಳು:–ಅವರು ನನ್ನ ಹಾಗೆ ಬೈತಲೆ ತೆಗೆದು ಕೊಂಡು ಬೊಂಬಾಯಿಗಂಟು ಹಾಕಿಕೊಂಡಿದ್ದಾರಲ್ಲಾ.

ತಂದೆ:–ಅವರು ಇಲ್ಲಿಯ ನಾಟಕಕ್ಕೆ ಸೇರಿಕೊಂಡಿದ್ದಾರೆ. ಆದ್ದರಿಂದಾ............

\+ + +

ಕುರುಡ:–(ಕಿವುಡನನ್ನು ಕುರಿತು ಗಟ್ಟಿಯಾಗಿ) ಏನು? ಎಲ್ಲಿಗೆ ಹೋಗಿದ್ದುದು?

ಕಿವುಡ:–ಗಾಯನ ಮಂದಿರದಲ್ಲಿ ಭಾಗವತ ಮೂಗಯ್ಯನವರ ಸಂಗೀತವಾಗುತ್ತಿತ್ತು. ಕೇಳೋಣ ಎಂತ ಹೋಗಿದ್ದೆ. ತಾವು ಎಲ್ಲಿಂದ ಬರುತ್ತಿದ್ದೀರಿ?

ಕುರುಡ:–ಮನೆಯಲ್ಲಿ ಕೂತು ಬೇಜಾರಾಯ್ತು ಸಿನೀಮಾ ನೋಡಿಕೊಂಡು ಬರುವಾ ಎಂತ ಹೋಗಿದ್ದೆ. ಈಗ ತಾನೇ ಮುಗಿಯಿತು. ಮನೇ ಕಡೆ ಹೋಗೋಣ ಅಂತ ಹೊರಟೆ. ನೀವು ಸಿಕ್ಕಿದಿರಿ. ಅದಿರಲಿ ಸಂಗೀತ ಚೆನ್ನಾಗಿತ್ತೋ?

ಕಿವುಡ:–ಅದೇನು ಕೇಳ್ತೀರಾ. ನಿಮಗೆ ಸಿನೇಮಾ ನೋಟ ಹೇಗಿತ್ತೋ ನನಗೆ ಸಂಗೀತ ಶ್ರವಣ ಹಾಗಿತ್ತು.

\+ + +

ಒಬ್ಬ ರೈಲ್ವೇ ಪ್ರಯಾಣಿಕ:– (ಮತ್ತೊಬ್ಬನನ್ನು ಕುರಿತು) ಇದೇನು ತಾವು ಮೈಸೂರು ದಸರಕ್ಕೊ?

ಮತ್ತೊಬ್ಬ:–ಇಲ್ಲ. ನಮ್ಮ ಹುಡುಗ ಮೈಸೂರು ನವರಾತ್ರಿ ನೋಟ ನೋಡಬೇಕು ಅಂದ. ಅದಕ್ಕೆ.

ಅರಕಲಗೂಡು ಯಸ್. ರಾಮಣ್ಣ, ಬೆಂಗಳೂರು ಸಿಟಿ.

\+ + +

ಉಪಾಧ್ಯಾಯ:–ಈ ಕೆಳಗಿನ ಶಬ್ದಗಳ ಸಂಧಿ ವಿಂಗಡಿಸು: 1. ಹೋಗೋಣ, 2. ಭೂಗೋಳ 3. ಕಂಗೊಳಿಸು. 4. ಕರಿವದನ. 5. ಬಂಗಾಳ 6. ಸಾಯಂಕಾಲ.

ವಿದ್ಯಾರ್ಥಿ:— 1. ಹೋಗು + ಕೋಣ = ಹೋಗೋಣ. 2. ಭೂಪನ+ಕೋಳ= ಭೂಗೋಳ. 3. ಕಣ್ಣು+ಕೊಳಿಸು= ಕಂಗೊಳಿಸು. 4. ಕರಿವ+ದನ=ಕರಿವದನ. 5. ಬಣ್ಣ + ಕಾಳ = ಬಂಗಾಳ. 6. ಸಾಯುವ+ಕಾಲ = ಸಾಯಂಕಾಲ.

The Jolly Folk.

\+ + +

ತಂದೆ:–ಮಗೂ, ನೀನು ಜೋಗ್ರಫಿ ಕಲಿತಿದ್ದೀಯಲ್ಲವೇ?

ಮಗ:–ಹೌದು.

ತಂದೆ:–ಹಾಗಾದರೆ ಇಂಗ್ಲೆಂಡ್ ಎಲ್ಲಿದೆಹೇಳು ನೋಡೋಣ.

ಮಗ:–ಬಿಸ್ಕುಟು ಡಬ್ಬಿಯ ಮೇಲಿದೆ.

\+ + +

ಮಗ:–ಅಪ್ಪಾ ಗಾಂಧಿಯೆಂದರೆ ಯಾರು?

ತಂದೆ:–'ಗಾಂವ' 'ದೀ' (ಊರು ಕೊಡು) ಎಂದು ಕೇಳುವವರು.

\+ + +

ಯುವಕ:–ನಿಮ್ಮ ಮಗಳನ್ನು ನನಗೆ ಮದುವೆ ಮಾಡಿಕೊಡುವಿರೋ?

ಗ್ರಹಸ್ಥ:—ನಿನ್ನ ಪ್ರಾಯವೆಷ್ಟು?

ಯುವಕ:–ಇಪ್ಪತ್ತೊಂದು ವರ್ಷ.

ಗ್ರಹಸ್ಥ:—ನನ್ನ ಮಗಳಿಗೆ ಇಪ್ಪತ್ತೈದು ವರ್ಷ. ನಿನಗೂ ಇಪ್ಪತ್ತೈದು ವರ್ಷ ಆಗುವಾಗ ಕೊಡುವೆನು.

ಶ್ರೀ ಪಿ. ಎಸ್. ಆಚಾರ್ಯ, ಮಂಗಳೂರು.

\+ + +

ತುಂಟ ಹುಡುಗನೊಬ್ಬನು ಅಂಗಡಿಯಲ್ಲಿ ಗಾಜಿನ ಸಾಮಾನು ಕೆಲವನ್ನು ತಪ್ಪಿ ಒಡೆದು ಹಾಕಿ ಓಡುವನು. ಅಂಗಡಿಯವ—

'ಎಲೋ ಪೋರಾ, ಇತ್ತಬಾ! ಎಲ್ಲಿಗೆ ಓಡುತ್ತಿರುವೆ?'

ತುಂಟ ಹುಡುಗ:–ಹಣ ತರಲಿಕ್ಕೆ ಸ್ವಾಮಿ.

\+ + +

ಬಾಲಕ:–(ಸಮೀಪದ ಮನೆಗೆ ಹೋಗಿ) ಯಜಮಾನರೇ, ನಿಮ್ಮ ಗ್ರಾಮಫೋನ್ ಪೆಟ್ಟಿಗೆಯನ್ನು ಒಂದು ಬಾರಿ ಕೊಡುವಿರಾ?

ಯಜಮಾನ:–ಯಾಕೋ?

ಬಾಲಕ:–ಅದು ಬೊಬ್ಬೆ ಹೊಡಿಯುತ್ತಿರುವುದರಿಂದ ನನ್ನಪ್ಪನಿಗೆ ನಿದ್ರೆಯೇ ಬರುವುದಿಲ್ಲವಂತೆ. ನಮ್ಮಲ್ಲಾದರೂ ಅದು ಸುಮ್ಮಗಿರಲಿ!

\+ + +

ಬಿಲ್ ಕಲೆಕ್ಟರ್:–ಸ್ವಾಮಿ, ನಮ್ಮ "ಬಡವರ ಬಂಧು" ಪತ್ರಿಕೆಯ ಒಂದು ರೂಪಾಯಿ ಚಂದಾಹಣವನ್ನು ಕೊಡುವಿರಾ? ಈಗಲೇ ರಶೀದಿ ಕೊಡುವೆನು.

ಚಂದಾದಾರ:–ಹುಂ! ಬೇಡಪ್ಪಾ ಬೇಡ. ನೀನು ಅದರ ಹಿಂದಣ ಸಂಚಿಕೆಗಳನ್ನೆಲ್ಲಾ ಒಂದು ಬಾರಿ ಕೊಂಡುಹೋಗು. ಆ ರಗಳೆಯೇ ಬೇಡ. ಸಾಯಲಿ!

\+ + +

ಉಪಾಧ್ಯಾಯ:–ರಂಗಾ, ನೀನು ಆನೆಯನ್ನು ನೋಡಿದ್ದೀಯೋ?

ರಂಗ:–ಹೌದು ಸರ್, ಎಷ್ಟೋ ನೋಡಿದ್ದೇನೆ.

ಉಪಾಧ್ಯಾಯ:–ಅದರ ವಿಷಯ ನಿನಗೆ ಗೊತ್ತಿದ್ದುದನ್ನು ಹೇಳು.

ರಂಗ:–ಆನೆಯು ನಿಕ್ಕೆಲ್ ಎಂಬ ಲೋಹದಿಂದ ತಯಾರಿಸಲ್ಪಟ್ಟಿದೆ. ಅದಕ್ಕೆ 12 ಪೈ ಬೆಲೆ ಇದೆ. ಅದರ ಅಂಚಿನಲ್ಲಿ 12 ಕಚ್ಚುಗಳೂ ಇವೆ.

\+ + +

ಯಜಮಾನಿ:–ಸಾಧಾರಣ ಖರ್ಚಿನಲ್ಲಿ ಒಳ್ಳೇ ಅಡಿಗೆ ಮಾಡಬಹುದಾ?

ಕೆಲಸದವಳು:–ಆಗಬಹುದು. ನಾನು ಮಾತ್ರ ನಿಮ್ಮಲ್ಲಿ ಊಟ ಮಾಡುವುದಿಲ್ಲ.

ಶ್ರೀ ಎಸ್. ಎಸ್. ಬೋಳೂರ್, ಮಂಗಳೂರು.

ನೀನು ಕೆಟ್ಟದ್ದನ್ನು ಬಿಡು. ಆಗ ಅದು ನಿನ್ನನ್ನು ಬಿಟ್ಟು ಹೋಗುವುದು.

ಮುಂಬಾಯಿಯಲ್ಲಿ ಗಿಳಿಯು ಕಳ್ಳನನ್ನು ಹಿಡಿಯಿತು.

ಕರಾಚಿಯ ಕೆಲವು ಸೋಲ್ಜರರು ಸ್ತ್ರೀರೋಗದಿಂದ ಕಂಗಾಲಾದರು. ವಿಚಾರಿಸಲಾಗಿ, ಅಲ್ಲಿಯ ಕೆಲವು ಟೇಕ್ಸಿ ಡ್ರೈವರುಗಳು ಆ ಸೋಲ್ಜರರಿಗೆ ವೇಶ್ಯೆಯರನ್ನೊದಗಿಸಿ ಕಮಿಶನ್ ಪಡೆಯುತ್ತಿದ್ದರೆಂದು ತಿಳಿದು ಬಂತು. ರಿಟ್ರೆಂಚ್‌ಮೆಂಟು ಆದುದರಿಂದಾಗಿರಬಹುದು!

—ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರಾಗಿದ್ದ ಖಾನ್ ಬಹದೂರ್ ಜಾವದ್ ಹುಸೇನರವರು ಕಡಪಾಕ್ಕೆ ವರ್ಗಾಯಿಸಲ್ಪಟ್ಟಿರುವರು. ಅವರ ಬದಲಿಗೆ ಇಲ್ಲಿಗೆ ಮಿ। ಇ. ಎಂ. ಗೋನ್ ಐ. ಸಿ. ಎಸ್ ಇವರು ಬಂದಿರುತ್ತಾರೆ.

—ಕಂಕನಾಡಿಯಲ್ಲಿ ಮೃತಹೊಂದಿದ ಪಿ. ಜೋನ್ ಪ್ಯಾಸ್ ಎಂಬವನ ಹೆಸರಿನಿಂದ ಪ್ರೆಸಿಡೆನ್ಸಿ ಲೈಫ್ ಇನ್ಸೂರೆನ್ಸ್ ಕಂಪೆನಿಯಿಂದ ಇನ್ಶೂರ್ ಹಣ ಪಡೆವುದಕ್ಕಾಗಿ ಒಬ್ಬ ಏಜಂಟರೂ ಕೆಲವು ಡಾಕ್ಟರರೂ ಉಪಾಯಮಾಡಿದರೆಂದೂ, ಆ ಉಪಾಯವು ಅಪಾಯವಾಗಿ, ಪೋಕನಾಟಗಳು ಸೆರಮನೆಗೆ ನಡೆಯಬೇಕಾಯಿತೆಂದೂ ತಿಳಿದುಬಂದಿದೆ.

—ಕಲ್ಕತ್ತದಲ್ಲಿ ೮ ಮಂದಿ ಬಂಗಾಳಿ ತರುಣರು ಸ್ಪೆಶಲ್ ಪೋಲೀಸರ ಕೆಲಸಕ್ಕೆ ಕೂಡಲೇ ಸೇರಬೇಕೆಂದೂ, ಅವರು ಪೋಸ್ಟಲ್ ರನ್ನರ್‌ಗಳೊಂದಿಗೆ ಓಡಬೇಕೆಂದೂ ಅಪ್ಪಣೆಯಾಗಿದೆ. ಒಳ್ಳೆ ಅಪ್ಪಣೆ!!!

—ಲಾಹೋರಿನಲ್ಲಿ ಕಳ್ಳನಾಣ್ಯಗಳನ್ನು ಕೆಲವರು ತರುಣರು ಕೂಡಿ ಮಾಡುತ್ತಿದ್ದರು. ಪೋಲೀಸರು ಇದನ್ನು ಪರಿಶೋಧಿಸಿ ಕೆಲವು ಮಂದಿಗಳನ್ನು ಒಂದು ಗುಡಿಸಲಲ್ಲಿ ಸೆರೆಹಿಡಿದಿರುವರು. ಹಣ ಸಂಪಾದನೆ ಮಾಡಬಾರದೆ?

—ಕರಾಚಿಯಲ್ಲಿ ಅಸ್ಪೃಶ್ಯರ ಕ್ಷೌರವನ್ನು ಮಾಡುವುದಿಲ್ಲನೆಂದು ಕ್ಷೌರಿಕರು ಹಠಹಿಡಿದರು. ಕೊನೆಗೆ ಕೆಲವು ಮುಂದಾಳುಗಳು ಸಮಾಧಾನ ಮಾಡಿ, ಅವರು ಅಸ್ಪೃಶ್ಯರ ಕ್ಷೌರಮಾಡಬೇಕಾಯಿತು. ಪಾಪ! ಮಾನಕ್ಕೆಕುಂದಾಯಿತು!

—ಚಿತ್ತಗಾಂಗಿನಲ್ಲಿ ಕೆಲವು ಯುವಕರ ಮೇಲೆ ನೋಟೀಸು ಜ್ಯಾರಿಮಾಡಲ್ಪಟ್ಟು, ಅವರು ಒಂದು ತಿಂಗಳ ತನಕ ತಮ್ಮ ಮನೆಯ ವಠಾರವನ್ನು ಬಿಡಬಾರದೆಂದು ಆಜ್ಞೆಯಾಗಿದೆ. ವಿಶ್ರಾಂತಿ ಕೊಟ್ಟಂತಾಯಿತು!

—ಮಹಾತ್ಮಾ ಗಾಂಧಿಯವರ ಒಡನಾಡಿಗಳಾಗಿ ದಕ್ಷಿಣಾಫ್ರಿಕದಲ್ಲಿದ್ದ ಮಿ। ಆರ್. ಕೆ. ಖಾನ್ ಎಂಬವರು ದಕ್ಷಿಣಾಫ್ರಿಕದಲ್ಲಿ ಕಾಲವಾದರು.

ಗಾಂಧಿಜೀಯವರನ್ನು ಬಿಡುಗಡೆಮಾಡಿ, ಸರಕಾರವು ಹಿಂದೂ ಮುಸಲ್ಮಾನ್ ಸಮಸ್ಯೆಯ ತೀರ್ಮಾನಕ್ಕಾಗಿ ಸಹಕರಿಸಬೇಕೆಂದು ಶೌಕತಾಲಿಯವರು ವೈಸರಾಯರೊಡನೆ ಕೇಳಿಕೊಂಡರು.

—ಶಾಂಘೈ ನಗರದಲ್ಲಿ ೧೧ ವರ್ಷದ ಬಾಲಕನೊಬ್ಬನಿಗೆ ಅವನ ತಂದೆ ತಾಯಿಗಳು ಬಂಧನ ಶಿಕ್ಷೆಯನ್ನು ೨ ವರ್ಷಗಳ ತನಕ ಕೊಟ್ಟರು. ಸರಕಾರವು ಆ ತಂದೆತಾಯಿಗಳನ್ನು ಶಿಕ್ಷಿಸಿತು.

—'ಸನ್' ಎಂಬ ರಂಗೂನಿನ ದೈನಿಕ ಪತ್ರಿಕೆಯ ಆಫೀಸಿನ ಗುಮಾಸ್ತನೊಬ್ಬನು ತೀರಿಕೊಂಡನು. ಮರುದಿನ ರಾತ್ರೆ ಆ ಪತ್ರಿಕೆಯ ಸಂಪಾದಕರು ಆಫೀಸಿನಲ್ಲಿ ಕೆಲಸಮಾಡುತಿದ್ದಾಗ ಅವನ ಪ್ರೇತವು ಅವನ ಮುಂಚಿನ ಕುರ್ಚಿಯಲ್ಲಿ ಕುಳಿತು ಕೆಲಸಮಾಡಿತೆಂದೂ, ಸಂಪಾದಕರು ಅದನ್ನು ಹೊರಗೆ ಹೋಗೆಂದೊಡನೆದ್ದು ಹೋಯಿತೆಂದೂ ತಿಳಿದುಬರುತ್ತದೆ.

—ಕಳೆದ ವರ್ಷ ಮದ್ರಾಸ್ ಪ್ರಾಂತ್ಯದಲ್ಲಿ ೨೧ ವಿಧವಾ ವಿವಾಹಗಳಾದುವೆಂದೂ, ಈ ವರ್ಷದ ಹತ್ತು ತಿಂಗಳಲ್ಲಿ ೩೫ಕ್ಕಿಂತಲೂ ಹೆಚ್ಚು ವಿವಾಹಗಳಾದುವೆಂದೂ ತಿಳಿದುಬರುತ್ತದೆ. ಹಿರಿಯರ ಕಣ್ಣು ಏನಾಗಿದೆ?

—ಮುಂಬಾಯಿ ವಿದ್ಯಾದಾಯಿನೀ ಸ್ಪೋರ್ಟ್ಸ್ ಕ್ಲಬ್ಬಿನ ಉತ್ಸುಕ ಮೆಂಬರರಾಗಿದ್ದ ರಾ। ಸಂಜೀವ ಶೆಟ್ರು ಕಳೆದ ತಿಂಗಳಲ್ಲಿ ಫೂಟ್‌ಬೋಲ್ ಆಡುವಾಗ ಜಖಂ ಹೊಂದಿ ಆಸ್ಪತ್ರೆಯಲ್ಲಿ ದೈವಾದೀನರಾದರು. ಅವರ ಕುಟುಂಬದವರೊಡನೆ ನಮ್ಮ ಸಹಾನುಭೂತಿಯಿದೆ.

—ಮೈಸೂರಿನ ದಸರಾ ಮಹೋತ್ಸವದ ಸಮಯದಲ್ಲಿ ಗಲಾಟೆಯಾಗಿ, ಅನೇಕರು ಜಖಂಗೊಂಡರೆಂದೂ, ಪೋಲೀಸರು ಜನಸಂದಣಿಗೆ ಲಾಥಿಯಿಂದ ಹೊಡೆದು ಅರಮನೆಯ ಎದುರು ನೆರೆದಿದ್ದವರನ್ನು ಚದರಿಸಿ, ಜನರನ್ನು ಉದ್ವಿಗ್ನರನ್ನಾಗಿ ಮಾಡಿದರೆಂದೂ ತಿಳಿದುಬರುತ್ತದೆ. ಪೋಲೀಸ ರಾಜ್ಯ!

—ಶ್ರೀ। ಸುಭಾಶ್ಚಂದ್ರಬೋಸರನ್ನು ಸಂಯುಕ್ತ ಪ್ರಾಂತ್ಯದ ಭೋವಾಲಿ ಎಂಬಲ್ಲಿಯ ಸೆರಮನೆಗೆ ಮದ್ರಾಸಿನಿಂದ ವರ್ಗಾಯಿಸಿರುವರೆಂದು ತಿಳಿದುಬಂದಿದೆ. ಬೋಸರು ಬಹಳ ಕ್ಷೀಣ ಹೊಂದಿರುವರು.

—ಶ್ರೀ। ಜಮ್ನಾದಾಸ್ ದ್ವಾರಕದಾಸರು ಒಪರೇಶನ್ ಒಂದನ್ನು ಮಾಡಿಸಲಿರುವುದರಿಂದ ಅವರನ್ನು ಒಂದು ತಿಂಗಳ ಪೆರೋಲಿನ ಮೇಲೆ ಬಿಡುಗಡೆಮಾಡಿರುವರು.

—ಪೇರಿಸ್ ನಗರದಲ್ಲಿ ಒಬ್ಬ ಗೃಹಸ್ಥನು ತನ್ನ ಪತ್ನಿಯ ಶೀಲದ ಮೇಲೆ ಸಂಶಯಗ್ರಸ್ತನಾಗಿ ಅವಳ ಪಾತಿವೃತ್ಯರಕ್ಷಣೆಗಾಗಿ ಒಂದು ಬೆಲ್ಟನ್ನು ಹಾಕಿದನು—ಪುಣ್ಯಾತ್ಮ!

—ಲಂಕೆಶಯರಿನ ಲೈಗ್ ಎಂಬಲ್ಲಿನ ಗನಿಯೊಂದರಲ್ಲಿ ಕೆಲಸಮಾಡುತ್ತಿದ್ದ ೭೦ ಮಂದಿಗಳು ತೂಗುತಕ್ಕಡಿ ಸಮೇತ ಬಿದ್ದು ಮೃತರಾದರು.

—ಅಸ್ಪೃಶ್ಯತಾನಿವಾರಣೆಯ ಬಗ್ಗೆ ಮಾಲವೀಯರು ಹೂಡಿರುವ ಚಳವಳಕ್ಕಾಗಿ ಶ್ರೀ: ಭೋಪಾಲದ ನವಾ ಬರು ೫೦೦೦ ರೂಪಾಯಿಗಳನ್ನು ಕೊಟ್ಟರು—ಜಯವಾಗಲಿ!

—ಚಿತ್ತಗಾಂಗಿನ ಫಾಹಾರತುಲಿ ಎಂಬಲ್ಲಿ ಅಂಗ್ಲ ಒಂದು ನರ್ತನ ಸಭೆಯು ನಡೆಯುತ್ತಿದ್ದಾಗ ಮಧ್ಯರಾತ್ರಿ ಕ್ರಾಂತಿಕಾರರು ಅವರ ಮೇಲೆ ಬಿದ್ದು ಎಲ್ಲರನ್ನೊ ಜಖಂಗೊಳಿಸಿದರು.

—ಲಾಹೋರು ಜೈಲಿನಲ್ಲಿರುವ ಡಾ। ಅಲಂ ಎಂಬ ವರ ಪತ್ನಿಯು 'ನನ್ನ ಗಂಡನು ಹೇಗೆ ಸತ್ತರೂ ಸಾಯಲಿ ದೇಶದ ಮರ್ಯಾದೆ ಉಳಿಯಲಿ' ಎಂದು ಪ್ರಕಟಿಸಿದ್ದಾರೆ ಇತಿಹಾಸಬೇಕೇ?

—ಜಗತ್ಪ್ರಸಿದ್ಧ ಮಲ್ಲಯುದ್ಧ ವಿಶಾರದನಾದ ಗಾಮ ನಿಗೂ ಕರಾಚಿಯ ಜಟ್ಟಿಯಾದ ಇಶಾರ್ ಸಿಂಘನೆಂಬವ ನಿಗೂ ಮಲ್ಲಯುದ್ಧ ನಡೆಯಲಿದೆ.

—ಮುಂಬಾಯಿಯ ಜೇಕ್ ಡಿ'ಸೋಜ 'ಎಂಬೊಬ್ಬ ಕ್ರೈಸ್ತನು ಗಿರಿಗಾಂವ ರಸ್ತೆಯ ಒಂದು ಮನೆಗೆ ಕಳವಿಗಾಗಿ ರಾತ್ರೆ ನುಗ್ಗಿದನು. ಸಮೀಪವಿದ್ದ ಗಿಳಿಯು ಕೂಗಿತು ಒಳಗಿನವರು ಹೊರಗೆ ಬಂದು ಪುನಃ ಒಳಗೆ ಹೋದರು ಸೋಜನನ್ನು ಕಂಡು ಗಿಳಿಯು ಪುನಃ ಆರ್ಭಟಿಸಿತು ಮನೆಯ ಯಜಮಾನನು ದೀಪ ಹಿಡಿದು ಹೊರ ಬರು ವಾಗ ಮಿ. ಸೋಜನು ಕಾಣಸಿಕ್ಕಿದನು. ಪೋಲೀಸ ರೊಡನೆ ಹೋಗಿರುತ್ತಾನೆ. ಕಲಿಯುಗದಲ್ಲಿ ಗಿಳಿಯೂ ಮಾತನಾಡುತ್ತದೆ!

—ಪಂಜಾಬದ ಬುಡ್ಲಾದ ಎಂಬಲ್ಲಿ ಮುಸ್ಲಿಮರು ಸಿಖ್ಖರ ಒಂದು ದನವನ್ನು ಕೊಂದುದಕ್ಕಾಗಿ ಕಲಹ ವುಂಟಾಗಿ ಎಂಟು ಹತ್ತು ಮಂದಿ ಲಯವಾದರು.

—ತಿರುಪತಿಯ ದೇವಸ್ಥಾನಗಳಿಗೆ ಹರಿಜನರನ್ನು ಪ್ರವೇಶಿಸ ಬಿಡುವಂತೆ ಪಂಡಿತ ಮಾಲವೀಯರು ಸಾಹಸ ಪಡುತ್ತಿರುವರು. ತಿರುಪತಿ ವೆಂಕಟರಮಣನು ಮುನಿ ಯನೆ ಎಂಬ ಪ್ರಶ್ನೆ!

ಊರೊಳಗೆ ನಮಗೆ ಅನೇಕಾನೇಕ ಚಂದಾದಾರ ರಿರುವುದರಿಂದ, ಸಂಚಿಕೆಗಳ ಬಟ್ವಾಡೆಯಲ್ಲಿ ಕೈತಪ್ಪಿ ವ್ಯತ್ಯಾಸವುಂಟಾಗಿ, ನಮ್ಮ ಕೆಲವು ಚಂದಾದಾರರು ಬೇಸ ರಕ್ಕೆ ಕಾರಣರಾಗಿರಬಹುದು. ಕ್ಷಮಿಸಬೇಕು.

ಸಂಪಾದಕ 'ಬಡವರ ಬಂಧು'

Printed by V. S. Kudva at the Sharada Press, Mangalore and published by Mangalore Jarappa at the Badavara Bandhu Office, Hampankatta, Mangalore